ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾಭಿನ್ನ
ಶ್ರೀಲಕ್ಷ್ಮೀಹಯಗ್ರೀವಾಯ ನಮಃ
ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀಕೃಷ್ಣನ ಪ್ರೀತಿಗಾಗಿ, ಅವನು ನಮ್ಮನ್ನು ಯಾವಾಗಲೂ ಅವನ ಮತ್ತು ಅವನ ಭಕ್ತರ ಧ್ಯಾನದಲ್ಲಿರಿಸಲು ನಮಗೆ ಬುದ್ಧಿಯನ್ನು ಪ್ರಚೋದಿಸಬೇಕೆಂದು ಅವನನ್ನು ಪ್ರಾರ್ಥಿಸುತ್ತಾ, ಬ್ರಾಹ್ಮಣರ ಮೊದಲ ಕರ್ತವ್ಯವಾದ ಸಂಧ್ಯಾವಂದನೆಯ ಬಗ್ಗೆ ಕ್ಷ-ಕಿರಣಚೆಲ್ಲುವಂತಹ ಈ ಕೆಳಕಂಡ ಎರಡು ಗ್ರಂಥಗಳನ್ನು ಗಣಕೀಕರಿಸಲು ಪ್ರಾರಂಭಿಸುತ್ತಿದ್ದೇನೆ. ಶ್ರೀಗಣೇಶಾಂತರ್ಗತ ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀವಿಶ್ವಂಭರಮೂರ್ತಿಯನ್ನು ನಿರ್ವಿಘ್ನ ಕೊಡಲೆಂದು ಪ್ರಾರ್ಥಿಸುತ್ತೇನೆ. ಸನ್ಮಾನ್ಯ ವಿದ್ವಜ್ಜನರು ತಪ್ಪುಗಳಿರುವಲ್ಲಿ ತಿದ್ದಲು ಸೂಚನೆ ನೀಡಬೇಕಾಗಿ ಪ್ರಾರ್ಥನೆ.

1. ಶ್ರೀ ಸಂಧ್ಯಾಭಾಷ್ಯ ಮೂಲ. ( ಶ್ರೀಸತ್ಯಾಧಿರಾಜತೀರ್ಥರ ಶಿಷ್ಯರಾದ ಶ್ರೀತಿಮ್ಮಣ್ಣಾಚಾರ್ಯರಿಂದ ವಿರಚಿತವಾಗಿದ್ದು ಶ್ರೀಮಾಧವಾಚಾರ್ಯರೆಂಬುವರ ಹಸ್ತಪ್ರತಿಯು )
ಮತ್ತು.

2. SRI RIG-VEDA SANDHYAVANDANA BHASHYA PRASNOTTARAVALI

OR

A CATECHISM ON RIG-VEDA SANDHYAVANDANAM
WITH BHASHYA AND FULL TEXT AND MEANING WORD FOR WORD.
(in accordance with Dvaita Philosophy)
in Canarese language and in Telugu Characters
By C. GURU RAO (Late Tahsildar)
And Revised By
Pandit Satavadhani S.M.S.T. LAKSHMANACHARIYA
OF TRIPLICANE , MADRAS.
( second edition -- published in 1904. )

**ಪೀಠಿಕೆ.**

(**ಸೂಚನೆ:-** ಈ ಪುಸ್ತಕದಲ್ಲಿ ಹಳೆಗನ್ನಡ ಶೈಲಿಯಲ್ಲಿರುವುದರಿಂದ ಕೆಲವು ಮಾರ್ಪಾಟನ್ನು ಮೂಲಕ್ಕೆ ಚ್ಯುತಿಬರದಂತೆ ಮಾಡಲಾಗಿದೆ.)

1. ಪ್ರಶ್ನೋತ್ತರಾವಲಿ ರೂಪ ಈ ಚಿಕ್ಕ ಗ್ರಂಥವನ್ನು ರಚಿಸುವುದಕ್ಕಾಗಿ ಎರಡು ಉದ್ದೇಶಗಳಿವೆ. ಬ್ರಾಹ್ಮಣ, ಕ್ಷತ್ರಿಯ,ವೈಶ್ಯರು ಈ ಮೂರೂ ಜಾತಿಯವರಿಗೆ ದ್ವಿಜನ್ಮರೆಂತಲೂ ದ್ವಿಜರೆಂತಲೂ ಹೆಸರು.''ಜನ್ಮನಾಜಾಯತೇಶೂದ್ರಃ ಕರ್ಮಣಾ ಜಾಯತೇ ದ್ವಿಜಃ'' ಎಂಬುವ ಪ್ರಮಾಣಾನುಸಾರ ಮೊದಲು ಮಾತೃಗರ್ಭದಿಂದ ಶೂದ್ರತೋಪಾದಿಯಲ್ಲಿ ಉತ್ಪನ್ನರಾದಾಗ್ಗ್ಯೂ ಈ ಮೂರು ಜಾತಿ ಜನಗಳು ಉಪನಯನಾಖ್ಯ ಕರ್ಮದಿಂದ ಕರ್ಮಾಧಿಕಾರವನ್ನು ಹೊಂದತಕ್ಕ ದ್ವಿತೀಯಜನ್ಮವನ್ನು ಹೊಂದುತ್ತಾರೆ. ಆ ಕಾರಣದಿಂದಲೇ ಇವರಿಗೆ ದ್ವಿಜರೆಂತಲೂ, ದ್ವಿಜನ್ಮರೆಂತಲೂ ಹೆಸರು ಉಂಟಾಗಿದೆ.

2. ಉಪನಯನವಾದ ಕ್ಷಣದ ಮೊದಲು ಉಪನೀತನಾದವಗೆ ವೇದವಿಹಿತ ಕರ್ಮಾನುಷ್ಠಾನಕ್ಕೂ , ವೇದಾಧ್ಯಯನಕ್ಕೂ ಅಧಿಕಾರ ಪ್ರಾಪ್ತವಾಗುತ್ತದೆ. ಕರ್ಮಯೆಂಬುವುದು ಪ್ರವೃತ್ತಿನಿವೃತ್ತಿಭೇದಗಳಿಂದ ಎರಡು ವಿಧ. ಫಲಾಕಾಂಕ್ಷವಾಗಿ ಮಾಡುವ ಕರ್ಮಕ್ಕೆ ಪ್ರವೃತ್ತಿ ಕರ್ಮವೆಂತ ಹೆಸರು. ಫಲಾಕಾಂಕ್ಷವಿಲ್ಲದೇ ಪರಮಾತ್ಮನ ಪ್ರೀತಿಸಂಪಾದನೆಮಾಡೋ ಉದ್ದೇಶದಿಂದ ಮಾಡುವ ನಿವೃತ್ತಿಕರ್ಮ

ಶ್ರೇಷ್ಠವಾದದ್ದು . ಪರಮಾತ್ಮನು ನಮ್ಮ ಕರ್ಮಗಳಿಂದ ಪ್ರೀತನಾದರೆ, ಪ್ರಾಪ್ತವಾಗದೇ ತಪ್ಪಿಹೋಗತಕ್ಕ ಸುಖಗಳಾವುದೂ ಇಲ್ಲ. ''ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ'' ಎಂಬುವ ನ್ಯಾಯದಿಂದ ಆ ಪರಮಾತ್ಮನು ಪ್ರೀತನಾದರೆ ಅನ್ಯರಿಂದ ಕೊಡಲಿಕ್ಕೆ ಅಸಾಧ್ಯವಾದ ಮೋಕ್ಷಾದಿ ಪುರುಷಾರ್ಥಗಳನ್ನು ಕೊಡುತ್ತಾನೆ. ಪರಮಾತ್ಮನು ಸರ್ವವ್ಯಾಪ್ತನು, ಸರ್ವನಿಯಾಮಕನು, ಸರ್ವಸುಖಪ್ರದನು, ಗುಣಪೂರ್ಣನು, ದೋಷದೂರನು, ವೈಷಮ್ಯ ನೈರ್ಘೃಣ್ಯಾದಿಗಳು ಇಲ್ಲದವನು. ''ನಾರಾಯಣಂ ನಿಖಿಲಪೂರ್ಣಗುಣೈಕದೇಹಂ ನಿರ್ದೋಷಮಾಪ್ಯತಮಪ್ಯಖಿಲೈಸುವಾಕ್ಯೈಃ। ಅಸ್ಯೋದ್ಭವಾದಿಮಶೇಷ ವಿಶೇಷತೋಪಿ ವಂದ್ಯಂ ಸದಾ ಪ್ರಿಯತಮಂ ಮಮ ಸನ್ನಮಾಮಿ ॥'' ಯೆಂಬುವ ಪ್ರಮಾಣಾ- ನುಸಾರ ನಮ್ಮಗಳಿಗೆ ಪ್ರಿಯತಮನಾದವ. ಆತನಿಗಿಂತ ನಮ್ಮಗಳಿಗೆ ಪಾಲಕನು ಮತ್ತೊಬ್ಬನು ಇಲ್ಲ. ನಿವೃತ್ತಿಕರ್ಮದಿಂದ ಆತನು ಪ್ರೀತನಾಗುವನು.

3. ಅಜ್ಞಾನಿಗಳು ಕೆಲವರು ಮನೋದಾರ್ಢ್ಯವಿಲ್ಲದೇ ಪ್ರವೃತ್ತಿಕರ್ಮಗಳಲ್ಲಿ ಪ್ರವಿಷ್ಠರಾಗಿ ಫಲಾಕಾಂಕ್ಷಿಗಳಾಗಿ ಅನ್ಯದೇವತಾರಾಧನಾದಿಗಳನ್ನು ಮಾಡುತ್ತಾ ಅಶಾಶ್ವತವಾದ ಫಲಗಳನ್ನು ಹೊಂದುತ್ತಾರೆ.

''ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ । ಮಾ ಕರ್ಮಫಲಹೇತುರ್ಭೂಃ ಮಾತೇ ಸಂಗೋಸ್ತ್ವಕರ್ಮಣಿ ॥'' ಎಂಬುವ ಶ್ರೀಭಗವದ್ಗೀತೋಕ್ತಿ ನ್ಯಾಯದಿಂದ ಕರ್ಮಮಾಡಲಿಕ್ಕೆ ಮಾತ್ರ ಪುರುಷಗೆ ಅಧಿಕಾರ ಹೊರ್ತು ಫಲಕೇಳಲಿಕ್ಕೆ ಅಧಿಕಾರವಿಲ್ಲ. ನಿವೃತ್ತಿ ಕರ್ಮಮಾಡಿದರೆ ಭಗವಂತನು ನೆಲ್ಲುಬಿತ್ತಿದವನಿಗೆ ಹುಲ್ಲುಬೇಕಂತ ಕೋರದೇ ಇದ್ದರೂ ನೆಲ್ಲು-ಹುಲ್ಲು ಎರಡೂ ಪ್ರಾಪ್ತವಾದಂತೆ ಐಹಿಕಾಮುಷ್ಮಿಕಾದಿ ಸಕಲ ಫಲಗಳನ್ನು ಕೊಡುತ್ತಾನೆ.

4. ಅಂಥಾ ನಿತ್ಯವಾಗಿ ವಿಧಿಸಲ್ಪಟ್ಟ ನಿವೃತ್ತಿ ಕರ್ಮಗಳೊಳಗೆ ಸಂಧ್ಯಾವಂದನೆ ಕರ್ಮ ಎಂಬುದು ಅತ್ಯಂತ ಶ್ರೇಷ್ಠವಾದದ್ದು ಸಂಧ್ಯಾವಂದನಕ್ಕೆ ಸಮಾನವಾದ ಅನ್ಯಕರ್ಮವಿಲ್ಲ. ಸಂಧ್ಯಾವಂದನವನ್ನು ಆಚರಿಸಿ ಇತರ ಸಚ್ಛಾಸ್ತ್ರಶ್ರವಣಯಜ್ಞ, ಅಧ್ಯಯನಾದಿ ಯಾವ ಕರ್ಮಗಳು ಮಾಡಿದಾಗ್ಯೂ ಫಲಕಾರಿ ಆಗುತ್ತವೆ. ಸಂಧ್ಯಾವಂದನವನ್ನು ಬಿಟ್ಟು ಯಾವ ಕರ್ಮ ಮಾಡಿದರೂ ಫಲಕಾರಿಯಾಗುವುದಿಲ್ಲವೆಂದು ಅನೇಕ ವಾಕ್ಯಗಳು ಇವೆ. ಅದಕ್ಕೋಸ್ಕರವೇ ಸಂಧ್ಯಾವಂದನಕ್ಕೆ ಪ್ರಾಮುಖ್ಯತೆ ವಿಶೇಷಾಕಾರವೆಂದು ಪ್ರತ್ಯೇಕವಾಗಿ ವಿವರಣೆಮಾಡತಕ್ಕ ಅವಶ್ಯಕತೆಯಿಲ್ಲ. ದ್ವಿಜಗೆ ಸಂಧ್ಯಾವಂದನೆ ಪ್ರಥಮಕರ್ತವ್ಯ.

5. ಈ ಸಂಧ್ಯಾವಂದನೆ ಮಂತ್ರವನ್ನು ನಿಷ್ಕಪಟ ಮನಸ್ಸಿನಿಂದ ಶ್ರದ್ಧಾಭಕ್ತಿಯುಳ್ಳವರಾಗಿ ನಿರ್ಮಲವಾದ ಆಸಕ್ತಿಯಿಂದ ತ್ರಿಕಾಲಗಳಲ್ಲಿ ಆಚರಿಸಿ ಗಾಯಿತ್ರೀಜಪಮಾಡುವವನು ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗಿ ಆತನ ಪಾದಾರವಿಂದಗಳನ್ನು ಹೊಂದಿ ಪಾರಲೌಕಿಕವಾದ ಸಮಸ್ತಸುಖಗಳನ್ನು ಹೊಂದುತ್ತಾನೆಂತಲೂ, ತದ್ವಾರಾ ಸಮಸ್ತದುರಿತಗಳಿಂದಲೂ ಕಷ್ಟಗಳಿಂದಲೂ ಪಾರಾಗಿ ಆಗಾಮಿಸಂಚಿತಕರ್ಮಗಳ ನಾಶಹೊಂದಿ ಶತೃಜಯವನ್ನು ಹೊಂದಿ ಅಪ್ರತಿಹತನಾಗುವನು. ಈ ಮಂತ್ರಕ್ಕೆ ಇಂಥಾ ಶ್ರೇಷ್ಠತ್ವ ಬರಲಿಕ್ಕೆ ಕಾರಣವೇನೋ ಸ್ವಲ್ಪವಾಗಿ ಈ ಸ್ಥಳದಲ್ಲಿ ವಿಚಾರಮಾಡಿನೋಡೋಣ.

6. ಸಂಧ್ಯಾವಂದನೆಯೆಂಬೋ ನಾಮ ಮಾತ್ರದಿಂದ ಉಚ್ಚಾರಮಾಡಲ್ಪಟ್ಟ ಮಂತ್ರಗಳಲ್ಲಿ ಗಾಯತ್ರೀಮಂತ್ರ ಪ್ರಧಾನ- ವಾದದ್ದು. ಈ ಗಾಯತ್ರೀಮಂತ್ರ ಸಮಸ್ತವೇದಗಳಲ್ಲಿ ಪುರಾತನವಾದ ಋಗ್ವೇದದ ತೃತೀಯಮಂಡಲದಲ್ಲಿ 62ನೇ ಸೂಕ್ತದಲ್ಲಿ ಹೇಳಲ್ಪಟ್ಟ 10ನೇ ಋಕ್. ಈ ಮಂತ್ರವನ್ನು ಗುರೂಪದೇಶವಿನಹ ಉಚ್ಚಾರಣೆ ಮಾಡಬಾರದು. ಈ ಮಂತ್ರವನ್ನು ಪ್ರಥಮದಲ್ಲಿ ಉಪನಯನಕಾಲದಲ್ಲಿ ಗುರುಗಳದ್ವಾರಾ ಉಪದೇಶವನ್ನು ಹೊಂದತಕ್ಕದ್ದು. ತನ್ನ ಜನಕಗೂ ಜ್ಯೇಷ್ಠಭ್ರಾತೃವಿಗೂ ಗುರುವೆಂತಲೇ ಹೆಸರು. ಆ ಪ್ರಕಾರ ಉಪನೀತನಾದವ ವೇದಾಭ್ಯಾಸಕ್ಕೆ ಅರ್ಹನಾಗುವನು. ಅನುಪನೀತನು ವೇದಾಭ್ಯಾಸಕ್ಕೆ ಅನರ್ಹನು. ಈ ಮಂತ್ರವನ್ನು ಉಪದೇಶಹೊಂದಿದ ಮೌಂಜೀಬಂಧನ ಮೊದಲು ಆಮರಣಾಂತವಾಗಿ ಪ್ರಾತಃ ಮಧ್ಯಾನ್ಹ ಸಾಯಂಕಾಲಗಳೆಂಬ ಮೂರುಕಾಲದಲ್ಲಿ ಪಠನಮಾಡತಕ್ಕದ್ದು.

7. ಈ ಗಾಯತ್ರೀ ಮಂತ್ರಯಾವುದೆಂದರೆ. (1) ಓಂ ಭೂರ್ಭುವಸ್ವಃ (2) ತತ್ಸವಿತುರ್ವರೇಣ್ಯಂ। ಭರ್ಗೋದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ॥ (3) ಓಮಾಪೋಜ್ಯೋತೀರಸೋಮೃತಂ ಬ್ರಹ್ಮಭೂರ್ಭುವಸ್ವರೋಂ ॥'' ಎಂಬುವುದು. 1ನೇದು ವ್ಯಾಹೃತಿ, 2ನೇದು ಗಾಯಿತ್ರೀ ಮತ್ತು 3ನೇದು ಗಾಯತ್ರೀ ಶಿರಸ್ಸು ಎಂದು ಹೆಸರು.

ಈ ಮಂತ್ರಕ್ಕೆ ಶ್ರೀಮದಾಚಾರ್ಯರು ಕೆಳಗೆ ಹೇಳಿದಂತೆ ಋಗ್ಭಾಷ್ಯದಲ್ಲಿ ಭಾಷ್ಯ ಮಾಡಿದ್ದಾರೆ.

''ಓಮಶೇಷಗುಣಾಧಾರ ಇತಿ ನಾರಾಯಣೋಽಪ್ಯಸೌ। ಪೂರ್ಣೋಽಭೂತಿವರೋಽನಂತಸುಖೋಽಯದ್ವ್ಯಾಹೃತೀರಿತಃ॥
ಗುಣೈಸ್ತತ ಪ್ರಸವಿತಾವರಣೀಯೋಽಗುಣೋನ್ನತೇಃ। ಭಾರತೀಜ್ಞಾನರೂಪತ್ವಾದ್ಭರ್ಗೋಽಧ್ಯೇಯೋಽಖಿಲೈರ್ಜನೈಃ॥
ಪ್ರೇರಕೋಽಶೇಷಬುದ್ಧೀನಾಂ ಸ ಗಾಯತ್ರ್ಯರ್ಥ ಈರಿತಃ। ಸಯೇವಾಖಿಲವೇದಾರ್ಥಸ್ಸರ್ವಶಾಸ್ತ್ರಾರ್ಥಯೇವಚ॥
ಸಪೂರ್ಣತ್ವಾತ್ಪುಮಾನ್ನಾಮ ಪೌರುಷೇಸೂಕ್ತ ಈರಿತಃ॥''

ಏವಂ ಯೋಜನೀಯಂ। ಯೋ ನೋಽಸ್ಮಾಕಂ ಅಶೇಷಜೀವಾನಾಂ ಧಿಯಃ ಬುದ್ಧಿಃ ಪ್ರಚೋದಯಾತ್ ಪ್ರೇರಯೇತ್, ತಸ್ಯ, ಸವಿತುಃ, ದೇವಸ್ಯ ನಾರಾಯಣಸ್ಯ, ತತ್ ಗುಣೈಸ್ತತಂ, ತಸ್ಮಾದೇವವರೇಣ್ಯಂ, ಭರ್ಗೋಽರೂಪಂ ಧೀಮಹಿ ಚಿಂತಯಾಮ।

ಇದಕ್ಕೆ ಅರ್ಥವನ್ನು ಕೆಳಗೆ ಬರಿಯೋಣವಾಗುತ್ತದೆ.

ಅಸೌ ನಾರಾಯಣಃ= ಈ ಸೂರ್ಯಾಂತರ್ಗತ ಸವಿತೃನಾಮಕ ಪರಮಾತ್ಮನು, ಓಂ= ಓಂಕಾರಾರ್ಥ ಭೂತನಾದವನು (ಗುಣಪೂರ್ಣನು) (ಯಾವ ನಿಮಿತ್ತದಿಂದ ಎಂದರೆ ) ; ಅಶೇಷಗುಣಾಧಾರ ಇತಿ=ಸಮಸ್ತ ಗುಣಗಳಿಗೆ ಅಧಾರಭೂತನಾದ ದೆಸೆಯಿಂದ; ಯಸ್ಮಾತ್=ಯಾವಕಾರಣ ದೆಸೆಯಿಂದ; ಏವಂ= ಈ ಪ್ರಕಾರ ನಾರಾಯಣನು ಓಂಕಾರಾರ್ಥಭೂತನಾದನೋ; ತಸ್ಮಾತ್= ಆ ಕಾರಣದೆಸೆಯಿಂದ ; ವ್ಯಾಹೃತೀರಿತಃ= ವ್ಯಾಹೃತಿಗಳಿಂದ ನುಡಿಸಿಕೊಳ್ಳಲ್ಪಟ್ಟವನು (ಏನು ನಿಮಿತ್ತದಿಂದ ದೇವರು ವ್ಯಾಹೃತಿಪ್ರತಿಪಾದ್ಯನಾಗಿದ್ದಾನೆಂದರೆ) ; ಓಂ ಭೂಃ= ಪರಮಾತ್ಮನು ಗುಣಪೂರ್ಣನು ; ಭುವಃ=ನಿರವಧಿಕ ಐಶ್ವರ್ಯಶ್ರೇಷ್ಠನು ; ಸ್ವಃ= ಸಂಪೂರ್ಣ ಸುಖಸ್ವರೂಪನು (ಇಂಥಾ ಗುಣಗಳುಳ್ಳ) ಯಃ= ಸೂರ್ಯಾಂತರ್ಗತ ಸೂರ್ಯನಿಯಾಮಕನಾದ ಯಾವ ಲಕ್ಷ್ಮೀ ನಾರಾಯಣನು ; ನಃ=ನಮ್ಮಗಳಿಗೆ ; ಧಿಯಃ=ಬುದ್ಧಿವೃತ್ತಿ ಅಥವಾ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ; ಪ್ರಚೋದಯಾತ್= ಪ್ರೇರಣೆಯನ್ನುಮಾಡುತ್ತಾ ಇರುವನೋ; ತಸ್ಯ= ಆ ; ದೇವಸ್ಯ= ಕ್ರೀಡಾದಿ ಗುಣ ವಿಶಿಷ್ಟತ್ವೇನ ಪ್ರಕಾಶಮಾನನಾದಂಥಾ ; ಸವಿತುಃ= ಜಗತ್ತಿಗೆ ಜನಕನಾದಂಥಾ (ಸೃಷ್ಟಿಕರ್ತನಾದಂಥಾ) ; ತತ=ಗುಣಗಳಿಂದ ವ್ಯಾಪ್ತನಾದ; ತಸ್ಮಾದೇವವರೇಣ್ಯಂ= ಆ ಕಾರಣದ್ದೆಶೆಯಿಂದ ಶ್ರೇಷ್ಠನಾದಂಥಾ ; ಭರ್ಗಃ=ಪರಿಪೂರ್ಣಕಾಂತಿಕ್ರೀಡಾಜ್ಞಾನಸ್ವರೂಪನಾದಂಥಾ (ಭರಣರಮಣಗಮನ ಸ್ವರೂಪವಾದ ರೂಪವನ್ನು); ಧೀಮಹಿ=ಧ್ಯಾನಮಾಡುತ್ತೇವೆ.

8. ಈ ಮಂತ್ರಕ್ಕೆ ಭಟ್ಟ ಭಾಸ್ಕರಾಚಾರ್ಯ, ಸಾಯಣಾಚಾರ್ಯ, ಶಂಕರಾಚಾರ್ಯ ಮೊದಲಾದವರು ಬಹುಜನ ನಾನಾವಿಧವಾದ ಭಾಷ್ಯಗಳನ್ನು ಬರೆದಿದ್ದಾರೆ. ಭರ್ಗಶಬ್ದಕ್ಕೆ ಬಹುಜನರು ಸೂರ್ಯನೆಂತಲೂ, ಸೂರ್ಯಾಧಿಷ್ಠಿತ ಕಾಂತಿ ಯೆಂತಲೂ, ಸವಿತು ಶಬ್ದಕ್ಕೆ ಆದಿತ್ಯಾಂತರ್ವರ್ತಿ ಅಥವಾ ಹಿರಣ್ಯಗರ್ಭಾಂತರ್ವರ್ತಿ ಪರಮೇಶ್ವರನೆಂತಲೂ ವ್ಯಾಖ್ಯಾನ ಬರೆದಿದ್ದಾರೆ. ಶಂಕರಾಚಾರ್ಯರು ಸವಿತುಃ= ಪ್ರಪಂಚಭ್ರಮಾಧಿಷ್ಠಾನವಾದ; ದೇವಸ್ಯ=ಸರ್ವಪ್ರಕಾಶರೂಪವಾದ; ಭರ್ಗಃ= ಅವಿದ್ಯಾರೂಪದೋಷನಾಶಕವಾದ ಜ್ಞಾನಸ್ವರೂಪನೆಂತ ವ್ಯಾಖ್ಯಾನಮಾಡಿದ್ದಾರೆ.

9. ಇನ್ನು ಈ ಮಂತ್ರಕ್ಕೆ ಬಹುಜನರು ಅನೇಕವಿಧವಾದ ಅರ್ಥಗಳನ್ನು ವ್ಯಾಖ್ಯಾನಮಾಡಿದ್ದಾರಾದರೂ, ಅವರೆಲ್ಲರೂ ಈ ಕೆಳಗೆ ಹೇಳತಕ್ಕ ವಿಷಯದಲ್ಲಿ ಮಾತ್ರ ಏಕೀಭೂತರಾಗಿದ್ದಾರೆ. ಅದು ಏನೆಂದರೆ, ಜೀವನ ಇಂದ್ರಿಯಗಳಿಗೆ ಚೈತನ್ಯವುಂಟುಮಾಡಿ, ಕ್ರಿಯೆಗಳಲ್ಲಿ ಉಪಯೋಗವಾಗುವಂತೆ ಪ್ರೇರಣೆಮಾಡತಕ್ಕ ಪರಮಾತ್ಮಶಕ್ತಿಯೊಂದು ಅಂತರ್ಯಾಮಿಯಾಗಿದೆಯೆಂತಲೂ, ಈ ಮಹಾಶಕ್ತಿಯ ಮಾಹಾತ್ಮ್ಯವನ್ನು ನಾವುಗಳು ಧ್ಯಾನಮಾಡಬೇಕೆಂತಲೂ ಈ ಮಂತ್ರಾರ್ಥವು. ಈ ಮಹಾಶಕ್ತಿಯನ್ನು ಬಹುಜನ ಬಹುನಾಮಗಳಿಂದ ಭಾವನೆಮಾಡುತ್ತಾರೆ. ಆ ಶಕ್ತಿಯೆಂಬುವುದು ವಿಷ್ಣುಸ್ವರೂಪವೆಂತಲೂ, ಕೆಲವರು ಜಗದಾಂಬಾ ಸ್ವರೂಪ ವೆಂತಲೂ, ಕೆಲವರು ಆದಿತ್ಯಸ್ವರೂಪವೆಂತಲೂ ಅನೇಕವಿಧಗಳಿಂದ ಹೇಳುತ್ತಾರೆ.

10. ಈ ಸಂಧ್ಯಾವಂದನೆಮಂತ್ರಗಳಲ್ಲಿ ತೇಜಸ್ಸು ಪೃಥಿವೀ ಮೊದಲಾದ ಕೆಲವು ಪ್ರಕೃತಿಸಂಬಂಧವಾದ ಅಚೇತನಪದಾರ್ಥ- ಗಳನ್ನು, ಅಗ್ನಿವರುಣ ಆದಿತ್ಯಾದಿ ದೇವತೆಗಳನ್ನು, ಪಾವಿತ್ರ್ಯತಾಮಾಡಲಿ ಎಂದು ಕೆಲವು ಶಬ್ದಗಳುಂಟು. ಪ್ರಕೃತಿಪದಾರ್ಥಗಳು ಅಚೇತನಗಳು. ಈ ಯಾವಕಾರ್ಯಗಳು ಮಾಡಲಿಕ್ಕೆ ಅವಕ್ಕೆ ಶಕ್ತಿಯಿಲ್ಲವಾದ್ದರಿಂದ ಪ್ರಕೃತ್ಯಾದಿಶಬ್ದಗಳಿಗೆ ತದಭಿಮಾನಿ ದೇವತಾಗಳೆಂತಲೂ, ತತ್ತನ್ನಿಯಾಮಕ ಪರಮಾತ್ಮನೆಂತಲೂ ಅರ್ಥ. ಇತರ ಆದಿತ್ಯಾದಿಶಬ್ದಗಳಿಗೆ ಸಂಧ್ಯಾಮಂತ್ರೋಕ್ತಕಾರ್ಯಗಳು ಸ್ವಾತಂತ್ರ್ಯೇಣ ಮಾಡಲಿಕ್ಕೆ ಶಕ್ತಿಯಿಲ್ಲದ್ದರಿಂದ ತದ್ದೇವತಾನಿಯಾಮಕ ಪರಮಾತ್ಮನೆಂದರ್ಥ. ಆ ಶಬ್ದಗಳಿಗೆ ಈ ಗ್ರಂಥದಲ್ಲಿ ಸಯುಕ್ತಿಗಳಿಂದ ಸಪ್ರಮಾಣಗಳಿಂದ ಪರಮಾತ್ಮನಲ್ಲಿ

ಸಮನ್ವಯಮಾಡಿರುತ್ತೆ.

11. ಶ್ರೀಪರಮಾತ್ಮನು ''ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮಂತರೋಯಮಯತ್ಯೇಷ ತ ಆತ್ಮಾಂತರ್ಯಾಮ್ಯಮೃತಃ।''

''ಯೋಪ್ಸುತಿಷ್ಠನ್ನದ್ಭ್ಯೋಂತರೋಯ ಮಾಪೋನ ವಿದುರ್ಯತ್ಯಾಪಃ ಶರೀರಂ ಯೋಪೋಂತರೋಯಮಯತ್ಯೇಷ ತ ಆತ್ಮಾಂತರ್ಯಾಮ್ಯಮೃತಃ।''

''ಯ ಆದಿತ್ಯೇತಿಷ್ಠನ್ನಾದಿತ್ಯಾದಂತರೋಯಮಾದಿತ್ಯೋ ನ ವೇದಯಸ್ಯಾಗ್ನಿಶ್ಶರೀರಂ ಯ ಆದಿತ್ಯಮಂತರೋಯಮಯತಿ''.

ಇದೇ ಪ್ರಕಾರ ವಾಯುವು, ದಿವಿ, ದಿಕ್ಕುಗಳು, ಚಂದ್ರನಕ್ಷತ್ರಗಳು, ಆಕಾಶ, ತಮಸ್ಸು, ತೇಜಸ್ಸು, ಸರ್ವಭೂತಗಳು, ಪ್ರಾಣ, ವಾಕ್ಕು, ಚಕ್ಷುಸ್ಸು, ಶ್ರೋತ್ರ, ಮನಸ್ಸು, ತ್ವಕ್, ವಿಜ್ಞಾನ, ರೇತಸ್ಸು, ಈ ಮೊದಲಾದ ಸಮಸ್ತಪದಾರ್ಥಗಳಲ್ಲಿ ಪರಮಾತ್ಮನು ಆ ಪದಾರ್ಥಗಳಿಗೆ ತಿಳಿಯದಂತೆ ಆ ಪದಾರ್ಥ ದೇಹರೂಪನಾಗಿ ಸ್ವತಂತ್ರತ್ವೇನ ಇದ್ದು ಆ ಪದಾರ್ಥಗಳನ್ನು ನಿಯಮನ- ಮಾಡುತ್ತಾ ಇದ್ದಾನೆಂದು ಬೃಹದಾರಣ್ಯಕೋಪನಿಷತ್ತು ಅಂತರ್ಯಾಮಿ ಬ್ರಾಹ್ಮಣದಲ್ಲಿ ಸ್ಪಷ್ಟವಾಗಿ ಹೇಳುತ್ತದೆ. ಆ ಪ್ರಕಾರ ಇರಲಾಗಿ ಸ್ವತಂತ್ರನಾದ ಪರಮಾತ್ಮನನ್ನು ಬಿಟ್ಟು ಅಸ್ವತಂತ್ರಪದಾರ್ಥಗಳನ್ನು ಕರ್ತೃತ್ವೇನ ಹೇಳಲಿಕ್ಕೆ ಕಾರಣವಿಲ್ಲ.

12. ಮತ್ತೊಂದು ಕಡೆ ಅಗ್ನಿಶಬ್ದಕ್ಕೆ 'ಅಗಂದೇಹಂ (ಗುಣಭೂತಂ ಜಗದ್ವಾ) ನಯತಿ ಪ್ರೇರಯತಿ'' ಎಂಬುವ ವ್ಯುತ್ಪತ್ತಿದ್ವಾರಾ ಅಗ್ನಿಪದಕ್ಕೆ ಮುಖ್ಯಾರ್ಥನಾಗಿ ಅಗ್ನಿಸ್ಥನಾದವನು ಪರಮಾತ್ಮನೆಂದು ಅರ್ಥಮಾಡಿದ್ದಾರೆ.

ಮತ್ತು ಶ್ರೀಭಗವದ್ಗೀತಾದಲ್ಲಿ ''ಅಹಂ ವೈಶ್ವಾನರೋಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ। ಪ್ರಾಣಾಪಾನ- ಸಮಾಯುಕ್ತಂ ಪಚಾಮ್ಯನ್ನಂ ಚತುರ್ವಿಧಂ।'' ಯೆಂದು ಶ್ರೀಕೃಷ್ಣದೇವರು ತಾನೇ ಅಗ್ನಿಯಾಗಿ ಕೆಲವುಕಾರ್ಯಗಳನ್ನು ಮಾಡುತ್ತೇನೆಂದು ಹೇಳಿದ್ದಾನೆ. ಮತ್ತು ಶ್ರೀಮದಾಚಾರ್ಯರು ರಚನೆಮಾಡಿದ ಬ್ರಹ್ಮಸೂತ್ರಭಾಷ್ಯದ ಸಮನ್ವಯಾಧ್ಯಾಯದಲ್ಲಿ ರುದ್ರಾದಿತ್ಯಾದಿ ಸರ್ವಶಬ್ದಗಳನ್ನು ಸಕಾರಣಗಳಿಂದ ಪ್ರಮಾಣಗಳಿಂದ ಶ್ರೀಪರಮಾತ್ಮನಲ್ಲೇ ಸಮನ್ವಯಮಾಡಿರೋಣದರಿಂದ ಆ ಶಕ್ತಿಯೆಂಬುದು ಯಾವನಾಮದಿಂದ ಕರೆದರೂ ವಿಷ್ಣುಸ್ವರೂಪವೆಂತಲೇ ಹೇಳತಕ್ಕದ್ದು. ಇತರ ದೇವತಾಗಳಿಗೆ ಮಂತ್ರಪ್ರತಿ ಪಾದ್ಯ ಶಕ್ತಿಗಳು ಇಲ್ಲ. ಆದಿಯಲ್ಲಿ ಬ್ರಹ್ಮನಿರ್ಗುಣನಾಗಿದ್ದು, ತರುವಾಯದಲ್ಲಿ ಸಗುಣವಾಗಿ ಮಾಯಾಬದ್ಧವಾದ ಜೀವನಾಗಿ ಆಗುತ್ತದೆಂತಲೂ, ಜಗತ್ತುಮಿಥ್ಯಾಯೆಂತಲೂ, ವ್ಯಾವಹಾರಿಕವಾಗಿ ಭೇದವೇ ಹೊರ್ತು ವಾಸ್ತವದಲ್ಲಿ ಜೀವಪರಮಾತ್ಮರಿಗೆ ಭೇದವೇ ಇಲ್ಲವೆಂತಲೂ ಬೋಧಿಸುವ ಶಂಕರಾಚಾರ್ಯರ ಅಭಿಪ್ರಾಯದಲ್ಲಿ ಪರಮಾತ್ಮನ ಪ್ರತಿಬಿಂಬಮಾತ್ರವಾದ ಜೀವಾತ್ಮ ತತ್ವದ ಉಪಾಸನೆ ಈ ಮಂತ್ರಾಭಿಪ್ರಾಯವೆಂತ ತಿಳಿಯದೇ, ಗಾಯತ್ರೀಮಂತ್ರದ ಪೂರ್ಣಾಭಿಪ್ರಾಯವು ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಸಮೂಲವಾಗಿ ಇನ್ನು ಮುಂದೆ ನಿರೂಪಣೆಮಾಡಲ್ಪಡುತ್ತದೆ.

13. ಈ ಮಂತ್ರಕ್ಕೆ ಇನ್ನು ಮುಂದೆ ಹೇಳುವ ಪ್ರಕಾರವಾಗಿ ಸಕಲಸನ್ಮತಗಳ ಸಾರವನ್ನು ಬೋಧಮಾಡುವುದರಿಂದ ಇದಕ್ಕೆ ಇಂಥಾ ಮಹಿಮೆ ಉಂಟಾಗಿದೆಯೆಂದು ನನ್ನ ಅಭಿಪ್ರಾಯ. ಅಸ್ಮದಾದಿ ಎಲ್ಲರಿಗೂ ಪರಮಾತ್ಮನೇ ಮುಖ್ಯಾಧಾರನು. ಆತನ ಅಂತಃಕರಣ ಸಹಾಯವು ಇಲ್ಲದಿದ್ದರೆ ನಮ್ಮಗಳಿಂದ ಯಾವಕಾರ್ಯವೂ ಮಾಡಲಿಕ್ಕೆ ಶಕ್ತಿ ಇಲ್ಲವೆಂತಲೂ ಪಂಚಭೂತ ಪರಿಣಾಮದೋಪಾದಿಯಲ್ಲಿ ಕಾಣಬರತಕ್ಕ ನಮ್ಮ ಜ್ಞಾನೇಂದ್ರಿಯಗಳು ಕೂಡಾ ''ನ ಋತೇ ತ್ವತ್ಕ್ರಿಯತೇ ಕಿಂಚನಾರೇ'' ಎಂಬ ಶ್ರುತ್ಯನುಸಾರವಾಗಿ ಆ ಮಹಾಸ್ವಾಮಿಯ ಸಹಾಯಚೈತನ್ಯಗಳಿಲ್ಲದೇ ಯಾವ ಕಾರ್ಯವೂ ಮಾಡಲಾರವೆಂತಲೂ ಸಮಸ್ತ ಸನ್ಮತಗಳು ಬೋಧನೆಮಾಡುತ್ತವೆ. ತದ್ವ್ಯತಿರೇಕ ಬೋಧನೆ ಮಾಡುವ ಸನ್ಮತಗಳು ಕಾಣಲಿಲ್ಲ. ಇದನ್ನೇ ಈ ಮಂತ್ರಾರ್ಥವು ಹೇಳುತ್ತದೆ. ಇದಕ್ಕಿಂತಲೂ ಉತ್ಕೃಷ್ಟವಾದ ಭಗವಂತನ ಚಿಂತನೆ ಮತ್ತೊಂದು ಕಾಣಬರಲಿಲ್ಲ. ಆದರೆ, ಈ ಪ್ರಕಾರಭಾವನೆ ಮಾಡೋಣದರಲ್ಲಿ ನಮ್ಮಗಳಿಗೆ ಇರುವ ಪಾಪಪುಂಜವನ್ನೂ ಪರಮಾತ್ಮನಲ್ಲಿ ಕೂಡಾ ನಿರೂಪಣೆಮಾಡಿ (ಆರೋಪಮಾಡಿ) ದೇವರು ಗೋಪಿಕಾಜಾರನೆಂದೂ, ನವನೀತಚೋರನೆಂತಲೂ, ಭಾರ್ಯಾಪಹೃತನೆಂತಲೂ, ಜನನಮರಣವಿಶಿಷ್ಟನೆಂತಲೂ, ಶುಕ್ಲಶೋಣಿತ ಸಂಬಂಧವುಳ್ಳವನೆಂತಲೂ, ಜರಾಸಂಧಾದಿ ದೈತ್ಯರಿಂದ ಪರಾಜಿತನಾದವನಾಗಿ ಪಲಾಯನ ಮಾಡಿದನೆಂತಲೂ, ಮಾತ್ರ ನಾವು ಆತನನ್ನು ಚಿಂತಿಸಬಾರದು.

14. ಈ ಗ್ರಂಥವನ್ನು ರಚನೆ ಮಾಡುವುದರಲ್ಲಿ ಉಂಟಾದ ದ್ವಿತೀಯ ಆವಶ್ಯಕತಾ ಈ ಕೆಳಗೆ ವಿವರಿಸಲ್ಪಟ್ಟಿದೆ.

ಮೇಲೆಕಂಡ ಗಾಯತ್ರೀ ಮಂತ್ರವು ಸಂಧ್ಯಾವಂದನಸ್ಥವಾಗಿದೆ. ಆ ಸಂಧ್ಯಾವಂದನೆಯೆಂಬುವುದು ಈವರೆವಿಗೂ ಹೇಳಿದಂತೆ ದ್ವಿಜಾತಿಗಳು ಸರ್ವರೂ ಆಚರಣೆ ಮಾಡತಕ್ಕದ್ದಾಗಿ ಇದೆ. ತತ್ರಾಪಿ ಪ್ರತಿನಿತ್ಯ ಮೂರಾವರ್ತಿ ಮಾಡತಕ್ಕದ್ದು. ತದ್ವಿಷಯಕವಾದ ಪ್ರಮಾಣಗಳು ಆಯಾಸ್ಥಳಗಳಲ್ಲಿ ಪ್ರಸ್ತಾಪಮಾಡಿ ಉದಾಹರಿಸಲ್ಪಟ್ಟಿವೆ. ಇಷ್ಟು ಅವಶ್ಯವಾದ ಸಂಧ್ಯಾವಂದನ ವನ್ನು ಕಾಲಬಲದಿಂದ ಬಹುಮಂದಿ ಆಚರಿಸುತ್ತಿಲ್ಲವು. ಬಹುಜನಕ್ಕೆ ಸಂಧ್ಯಾವಂದನೆಯೆಂಬುವುದಕ್ಕೆ ಅರ್ಥವೇನು, ಎಷ್ಟು ಸಂಧ್ಯಾವಂದನೆಗಳುಂಟು, ಸಂಧ್ಯಾವಂದನೆ ಯಾವಕಾಲದಲ್ಲಿ ಯಾವರೀತಿಯಿಂದ ಯಾವಸ್ಥಳದಲ್ಲಿ ಮಾಡತಕ್ಕದ್ದೆಂತಲೂ, ಗಾಯತ್ರೀಜಪಮಾಡುವ ಕ್ರಮಗಳಾವುವು, ಆ ಆಚರಣೆಯನ್ನು ಬಿಟ್ಟರೆ ಏನು ಪ್ರತ್ಯವಾಯ (ಅನಿಷ್ಟವು)ವು ಪ್ರಾಪ್ತವಾಗುತ್ತ- ದೆಂತಲೂ ಆ ಕರ್ಮವನ್ನು ಮಾಡಿದರೆ ಏನು ಫಲವು ಬರುತ್ತದೆಂತಲೂ, ಗಾಯತ್ರೀ ಜಪ ಯಾವರೀತಿಯಿಂದ ಮಾಡಬೇಕೆಂತಲೂ, ಈ ಮೊದಲಾದ ಅಂಶಗಳು ತಿಳಿಯದು. ಅನೇಕ ಜನರಿಗೆ ಸಂಧ್ಯಾವಂದನೆ ಸರಿಯಾಗಿ ಸಮಂತ್ರಕವಾಗಿ ಬರೋಣವಿಲ್ಲ. **ಬಾಲ್ಯಾವಸ್ಥಾದಲ್ಲಿ ಒಬ್ಬ ಪುರೋಹಿತರು ದೀಕ್ಷಾಕಾಲ ಮುಗಿದು ಕಂಕಣವಿಸರ್ಜನೆ ಆಗುವವರೆಗೂ ನಾಮಕಾರ್ಥವಾಗಿ ಉಪವೀತನಿಗೆ ಸಂಧ್ಯಾವಂದನೆ ಹೇಳಿ, ತರುವಾಯದಲ್ಲಿ ಬಿಟ್ಟುಬಿಡುತ್ತಾರೆ.** ಆ ಸ್ವಲ್ಪಕಾಲದಲ್ಲಿ ಸಂಧ್ಯಾವಂದನೆಯು ಅಭ್ಯಾಸವಾಗುವುದಿಲ್ಲ. ತರುವಾಯದಲ್ಲಿ ಆ ಬಾಲಕನಿಗೆ ಸಂಧ್ಯಾವಂದನೆಯನ್ನು ಯಾರೂ ಹೇಳುವುದಿಲ್ಲ. ಸಂಧ್ಯಾವಂದನೆಯು ಬರುವುದಿಲ್ಲ. ಇದಲ್ಲದೆ ಪ್ರಾಯೇಣ ಸಂಧ್ಯಾವಂದನೆ( ಪ್ರಾತಃ ಮತ್ತು ಮಧ್ಯಾಹ್ನ) ಯೆಂಬುದು ಭೋಜನಾತ್‌ಪೂರ್ವದಲ್ಲಿ ಮಾಡತಕ್ಕ ಕರ್ಮವಾಗಿದ್ದರಿಂದಲೂ, ಆಂಗ್ಲೇಯಭಾಷಾಭ್ಯಾಸಮಾಡುವ ವಿದ್ಯಾರ್ಥಿಗಳು ಒಂದು ಯಾಮದವರೆವಿಗೂ ಆಂಗ್ಲೇಯಭಾಷಾಪಾಠಾದಿಗಳು ಓದಿ ನಂತರ ಸ್ನಾನ- ಭೋಜನಗಳನ್ನು ತೀರಿಸಿಕೊಂಡು ಪಾಠಶಾಲಾಕ್ಕೆ ಹೋಗುವ ತೀವ್ರದಲ್ಲಿ( ಅವಸರದಲ್ಲಿ) ಭೋಜನಾದಿಗಳಿಗೆ ಯಾವಲೋಪವೂ ಬರುವುದಿಲ್ಲ ಹೊರ್ತು, ಸಂಧ್ಯಾವಂದನೆಗೆ ಮಾತ್ರ ಪೂರ್ಣಲೋಪಬರುತ್ತದೆ. ಇದು ನೋಡುತ್ತಾ ಇರಲಾಗಿ ಬಹುಶೋಚನೀಯವಾಗಿದೆ. ಕೆಲವು ಈ ಕಾಲದ ವಿದ್ಯಾರ್ಥಿಗಳೇ ಅಲ್ಲ, ಕೌಮಾರಾವಸ್ಥೆ, ಯೌವನಾವಸ್ಥೆಯಲ್ಲಿ ಇದ್ದವರೂ ಕೂಡಾ ಇದೇ ಪ್ರಕಾರಮಾಡುತ್ತಾ ಒಪ್ಪತ್ತು ಆದರೂ ಸಂಧ್ಯಾವಂದನೆ ಶಬ್ದಕೂಡಾ ಉಚ್ಚಾರಣೆ ಮಾಡದಹಾಗೆ ಇದ್ದವರನ್ನು ನೋಡಿ ಬಹು ಸಂಕಟವಾಗುತ್ತದೆ.

15. ಮತ್ತು ಬಾಲಕನಿಗೆ ಸಂಧ್ಯಾವಂದನೆ ಒಬ್ಬರೂ ಕ್ಲುಪ್ತವಾಗಿ ಹೇಳುವುದಿಲ್ಲ. ಕೆಲವು ಕಾಲ ಒಬ್ಬ ಪುರೋಹಿತರು, ಕೆಲವು ಕಾಲ ಮತ್ತೊಬ್ಬರು ಹೇಳುತ್ತಾರೆ. ಆ ಕಾರಣದ ದೆಸೆಯಿಂದ ಒಂದು ಶಾಖಾ ಸಂಧ್ಯಾವಂದನೆ ಒಬ್ಬರಿಗೆ ಪಾಠವಾಗಿರುವಂತೆ ಮತ್ತೊಬ್ಬರಿಗೆ ಸರಿಯಾಗಿ ಪ್ರಾಯೇಣ ಬರುವುದಿಲ್ಲ. ಪಾಠಭೇದಗಳು ಅನೇಕವಾಗಿದೆ. ಲೋಕದೊಳಗೆ ''ಸಂಧ್ಯಾವಂದನ ಸಾವಿರ ಪಾಠ'' ಎಂದು ಹೇಳುವ ಲೋಕೋಕ್ತಿಯನ್ನು ಅನುಸರಿಸಿ ಒಂದೇ ಶಾಖಾದಲ್ಲಿಯೇ ಅನೇಕಪಾಠಗಳು ಆಗಿವೆ. ತತ್ರಾಪಿ, ಅರ್ಘ್ಯಪ್ರದಾನಾನಂತರ ಜಪಭಾಗದಲ್ಲಿಯೂ, ಉಪಸ್ಥಾನಭಾಗದಲ್ಲಿಯೂ ಬಹುಪಾಠಗಳಿವೆ. ಅವೆಲ್ಲ ಆಯಾಯಾ ಸ್ಥಳಗಳಲ್ಲಿ ನಮಗೆ ತಿಳಿದಷ್ಟುವರೆವಿಗೂ ಬರೆದಿರುತ್ತದೆ. ಇದರಿಂದ ಈ ಪುಸ್ತಕವನ್ನು ಓದುವವರು ತಮಗೆ ಬಂದ ಪಾಠಪ್ರಕಾರ ಇದರಲ್ಲಿ ಇಲ್ಲದಿದ್ದರೆ ಈ ಪುಸ್ತಕದಲ್ಲಿ ಹಾಕಿದ್ದು ತಪ್ಪೆಂದು ಅಭಿಪ್ರಾಯಪಡಬಾರದು. ನಮಗೆ ಸಾಧ್ಯವಾದವರೆವಿಗೂ ಸುಮಾರು ಹತ್ತು ಪುಸ್ತಕಗಳನ್ನು, ಆ ಪೈಕಿ ಕೆಲವು ಪ್ರಾಚೀನ ಬರೆದಪುಸ್ತಕಗಳನ್ನು ತರಿಸಿ ನೋಡಿ ಈ ಗ್ರಂಥವನ್ನು ಛಾಪಾಹಾಕೋಣವಾಗಿದೆ.

16. ಭರತಖಂಡದಲ್ಲಿ ಕೆಲವು ಶತಾಬ್ದಿಗಳಿಗೆ ಪೂರ್ವದಲ್ಲಿ ಮಹಾನುಭಾವರಾದ ಜ್ಞಾನಿಗಳು ಸಂಧ್ಯಾದಿ ಸತ್ಕರ್ಮಗಳನ್ನು ಕಾಲಾನುಸಾರವಾಗಿ ಮಾಡಿ ಅಯಾಚಿತವೃತ್ತಿಯಿಂದ ಜೀವನಮಾಡುತ್ತಾ ಅನೇಕ ಸಚ್ಛಾಸ್ತ್ರಗಳಿಗೆ ಟೀಕಾಟಿಪ್ಪಣಿಗಳನ್ನು ಮಾಡಿ ''ನರಃಪತಿತ ಕಾಯೋಪಿ ಯಶಃ ಕಾಯೇನ ಜೀವತಿ'' ಎಂಬುವ ನ್ಯಾಯದಿಂದ, ಆ ಮಹಾನುಭಾವರು ದೇಹತ್ಯಾಗವನ್ನು ಮಾಡಿ ಪರಮಾತ್ಮನ ಪಾದಾರವಿಂದವನ್ನು ಹೊಂದಿದ್ದರೂ, ಅವರು ರಚನೆಮಾಡಿದ ಗ್ರಂಥಗಳು ನಿತ್ಯ ಪಾಠಪಾರಾಯಣಾದಿ- ಗಳಿಗೆ ಉಪಯೋಗಪಡುತ್ತಾ ಇರಲಾಗಿ, ಆ ಮಹಾನುಭಾವರು ಜೀವಂತರಾಗಿದ್ದಾರೆಂದು ಎಣಿಸತಕ್ಕದ್ದು. ಅಂಥಾ ಮಹಾನು- ಭಾವರು ಕಲಿಕಾಲಬಲದಿಂದ ಕ್ರಮವಾಗಿ ಕಡಿಮೆಯಾಗುತ್ತಾ ಬರುತ್ತಿದ್ದಾರೆ. ಮತ್ತು ಜ್ಞಾನಿಗಳಾದ ತತ್ರಾಪಿ ಮಧ್ವಶಾಸ್ತ್ರಸತ್ಸಂಪ್ರದಾಯ ಪ್ರವರ್ತಕರಾದ, ಪೂಜ್ಯರಾದ ಬಹುಮಂದಿ ಆಚಾರ್ಯರು , ರಾಯರುಗಳು ಭೂಲೋಕವನ್ನು ತ್ಯಾಗಮಾಡಿಹೊರಟು ಅವರ ಸ್ಥಾನದಲ್ಲಿ ಪ್ರಕೃತಿಪ್ರಧಾನವಾದಿಗಳು, ನಾಸ್ತಿಕ್ಯ, ಅದ್ವೈತ, ಬೌದ್ಧ ಕೈಸ್ತ, ಚಾರ್ವಾಕಾದಿ ಮತಾವಲಂಬಿಗಳಾಗಿ ನಾಮಮಾತ್ರದಿಂದ ಬ್ರಾಹ್ಮಣರೆಂದು ಕರೆಸಿಕೊಳ್ಳುವವರು, ಆ ನಾಮಮಾತ್ರಕೂಡಾ ತ್ಯಜಿಸಿದವರು ವಿಶೇಷಾಕಾರವಾಗಿ ವ್ಯಾಪ್ತರಾಗಿದ್ದಾರೆ. ಇಂಥಾ ಘೋರವಾದ ಕಾಲದಲ್ಲಿಕೂಡಾ ಸಂಧ್ಯಾನಾಮಮಾತ್ರವಾದರೂ ದ್ವಿಜರಲ್ಲಿ

ಇದೆ. ಅದೂಕೂಡಾ ಅದೃಶ್ಯವಾಗುವ ಕಾಲ ಬರತದೋ ಏನೋ ಎಂದು ಭಯಾಸ್ಪದವಾಗಿದೆ. ಅಂಥಾ ದುಷ್ಕಾಲಬಾರದಂತೆ ಸಮಸ್ತ ಹಿಂದೂ ಮತಾನುಯಾಯಿಗಳಾದ ಜನರು ಶ್ರೀಮಜ್ಜನಾರ್ದನನಾಮಕ ಪರಮಾತ್ಮನನ್ನು ಕುರಿತು ಪ್ರಾರ್ಥನೆಮಾಡತಕ್ಕದ್ದು.

17. ಸಂಧ್ಯಾವಂದನೆ (ತತ್ರಾಪಿ ಗಾಯತ್ರಿ)ಮಂತ್ರಗಳು ಶೃತಿಪ್ರತಿಪಾದ್ಯವಾದದ್ದು.ಆ ಮಂತ್ರಸ್ಥಗಳಾದ ಶಬ್ದಗಳಿಗೆ ಪರಮಾತ್ಮನಲ್ಲಿ ಸಮನ್ವಯಮಾಡುವುದು ಬಹು ಕಠಿಣ. ಸಂಧ್ಯಾವಂದನೆ ಸಂಸ್ಕೃತಭಾಷೆಯಲ್ಲಿ ಇದೆ. ಸಂಸ್ಕೃತಭಾಷಾಭಿಜ್ಞರಿಗೆ ಆ ಮಂತ್ರಸ್ಥಗಳಾದ ಶಬ್ದಾರ್ಥಗಳು ತಿಳಿಯುವುದು ಅಸಾಧ್ಯವಾದರೆ, ಅನಭಿಜ್ಞರಿಗೆ ವಿಷಯದೂರತೋಪಾಸ್ತವಾಗಿದೆ. ಸಂಧ್ಯಾವಂದನೆಗೆ ಕೆಲವರು ಮಹಾನುಭಾವರು ಭಾಷ್ಯಗಳನ್ನು ಮಾಡಿದ್ದಾರೆ. ಈ ಭಾಷ್ಯಗಳೆಲ್ಲವೂ ಸಂಸ್ಕೃತಭಾಷೆಯಲ್ಲೇ ಉಂಟು. ಮತ್ತೆ ಕೆಲವು ಭಾಷ್ಯಗಳಲ್ಲಿ ಸಂಹಿತಾಪೂರ್ಣವಾಗಿ ಹಾಕಲಿಲ್ಲ. ಪುಟಾಕ್ಷರಗಳಿಂದಲೂ ಪುಟಶಬ್ದಗಳಿಂದಲೂ ತೋರಿಸಿದ್ದಾರೆ. ಶಬ್ದಪದಚ್ಛೇದ ಮಾಡಿ ಪ್ರತಿಪದ ಅರ್ಥ ಬರೆಯಲಿಲ್ಲ. ಮತ್ತು ಕೆಲವರು ಸಂಧ್ಯಾವಂದನೆಗೆ ಭಗವತ್ಪರ ಅರ್ಥ ಮಾಡದೇ ಮೇಲೆಕಂಡ ಪ್ರಕಾರ ತತ್ತದ್ದೇವತಾಕವಾದ ಅಪಾರ್ಥಗಳನ್ನು ಮಾಡಿದ್ದಾರೆ. ಒಬ್ಬಿಬ್ಬರು ರಾಯರುಗಳು ತೆಲುಗು ಭಾಷೆಯಲ್ಲಿ ಸಂಧ್ಯಾವಂದನೆಗೆ ಅರ್ಥ ಬರೆದಿದ್ದಾರೆ. ಅವರೂ ಕೂಡಾ ಪರಮಾತ್ಮನ ಪರ ಅರ್ಥವನ್ನು ಮಂತ್ರಗಳಿಗೆ ಮಾಡಲಿಲ್ಲ.

18. ಕಾಲಬಲದಿಂದ ಸಂಸ್ಕೃತವಿದ್ಯಾಭ್ಯಾಸ ಕ್ರಮೇಣ ನ್ಯೂನವಾಗುತ್ತಾ ಬರುತ್ತಾ ಇದೆ. ಸಂಸ್ಕೃತಭಾಷೆ ಮೃತಭಾಷೆಯಾಗುತ್ತಿದೆ. ಆ ವಿದ್ಯಾಭ್ಯಾಸಯೆಂಬುವ ಸೂರ್ಯ ಅಸ್ತಂಗತನಾಗೋ ಕಾಲವು ಪ್ರಾಪ್ತವಾಗಿದೆಯೆಂದು ತೋರುತ್ತದೆ. ಪ್ರತಿವಿದ್ಯಾರ್ಥಿಯೂ ವಿದ್ಯಾರಂಭದಲ್ಲಿ ಆಂಗ್ಲಭಾಷಾ ಪ್ರಾರಂಭಮಾಡುತ್ತಾನೆ ಹೊರ್ತು ಪರಂಪರಾಪ್ರಾಪ್ತವಾದ ಸ್ವಭಾಷೆಯನ್ನು ಆರಂಭಮಾಡುವುದಿಲ್ಲ. ಈಗ ಪ್ರಾಯೇಣ ಲೌಕಿಕರಲ್ಲೇ ಅಲ್ಲ, ಅನೇಕ ಪುರಾತನ ಸತ್ಸಂಪ್ರದಾಯಪ್ರವರ್ತಕ ಆಚಾರ್ಯರುಗಳೂ ಕೂಡ ತಮ್ಮ ತಮ್ಮ ಮಕ್ಕಳು ಅಳಿಯಂದ್ರುಗಳನ್ನು ಇಂಗ್ಲೀಷುಭಾಷಾ ಅಭ್ಯಾಸದಲ್ಲೇ ನಿರತರನ್ನಾಗಿ ಮಾಡಿ ಬಿ.ಎ.; ಬಿ.ಎಲ್. ; ಎಂ.ಬಿ. ಎಂ.ಡಿ; ಮೊದಲಾದ ಪರೀಕ್ಷೆಗಳು ಪ್ಯಾಸುಮಾಡಿಸಿ ಆ ವಿದ್ಯಾದಲ್ಲಿ ಬಹುಪಾಂಡಿತ್ಯ ಉಳ್ಳವರಾಗಿ ಮಾಡಿದ್ದಾರೆ. ತಂದೆಗಳು ಭಲೋ ವಿದ್ವಾಂಸರಾಗಿ ಸದಾಚಾರ ನಿರತರಾಗಿ ಇರೋಣ; ಅವರ ಮಕ್ಕಳು ಮೊಮ್ಮಕ್ಕಳು ಮೊದಲಾದವರು ಆ ಪರಂಪರಾ ಪ್ರಾಪ್ತವಾದ ಶಾಸ್ತ್ರ ಆಚಾರಾದಿಗಳನ್ನು ಬಿಟ್ಟು ಪಾದರಕ್ಷೆಗಳು ಸಹಿತರಾಗಿ ಸಂಧ್ಯಾವಂದನೆ ಶಬ್ದವಾದರೂ ಉಚ್ಚಾರಣವಿಲ್ಲದೇ ಭೋಜನಾದಿಗಳು ಮಾಡತಕ್ಕವರು ಬಹುಮಂದಿ ನಿತ್ಯಕಣ್ಣಿಗೆ ಬೀಳುತ್ತಾ ಇದ್ದಾರೆ. ''ಸಂಸ್ಕೃತವಿದ್ಯಾ ಅನಾರಂಭಣೀಯಾ ಪ್ರಯೋಜನಾಭಾವಾತ್'' ಎಂಬುವ ರೀತಿಯಿಂದ ಸಂಪೂರ್ಣ ಐಹಿಕಫಲದಲ್ಲೇ ಇಚ್ಛಾ ಉಳ್ಳವರಾಗಿ ಆಶಾಬದ್ಧರಾಗಿ ಆಂಗ್ಲೇಯ ಭಾಷಾವನ್ನು ಅಭ್ಯಾಸ ಮಾಡುತ್ತಾರೆ. ಇವರಿಂದ ಆಂಗ್ಲೇಯಭಾಷಾ ಅಭ್ಯಾಸಮಾಡಬಾರದೆಂದು ಅಭಿಪ್ರಾಯವಲ್ಲ. ತಮ್ಮ ಸ್ವಭಾಷೆಯನ್ನು ಬಿಡಬಾರದು ಎಂಬುವುದೇ ನನ್ನ ಅಭಿಪ್ರಾಯ. ಸಂಸ್ಕೃತಭಾಷಾ ಬಹು ರಮ್ಯವಾದದ್ದು , ಸುಂದರ- ವಾದದ್ದು , ಮೋಕ್ಷಫಲಪ್ರದವಾದದ್ದು , ಗೂಢರಸಭರಿತವಾದದ್ದು. ಇಂಥಾ ವಿದ್ಯೆಯನ್ನು ಅಜ್ಞಾನದಿಂದ ತ್ಯಾಗಮಾಡಬೇಡಿರಿ.

19. ಪ್ರಕೃತದಲ್ಲಿ ಮ್ಯಾಲಕಂಡಪ್ರಕಾರ ಸಂಧ್ಯಾವಂದನೆ ಸಂಸ್ಕೃತಭಾಷೆಯಲ್ಲಿ ಇರೋಣವಲ್ಲದೇ ಕ್ಲಿಷ್ಟವಾಗಿರೋಣ, ಭಾಷ್ಯಾದಿಗಳು ಕೂಡಾ ಸಂಸ್ಕೃತಭಾಷೆಯಲ್ಲೇ ಇರೋಣದರಿಂದ ಬಹುಮಂದಿಗೆ ಅದರ ಅರ್ಥಜ್ಞಾನವಿಲ್ಲದೇ ಅನಾದರ ಮಾಡುತ್ತಾರೆಂದು ತೋರುತ್ತದೆ. ಆದಕಾರಣದಿಂದ ಸಂಸ್ಕೃತವನ್ನು ತಿಳಿಯದವರ ಉಪಯೋಗಾರ್ಥವಾಗಿಯೂ, ಕಿಂಚಿತ್ ಜ್ಞಾನಿಗಳಿಗೆ ಕೂಡಾ ಉಪಯೋಗವಾಗುವುದಕ್ಕಾಗಿಯೂ, ಈ ಗ್ರಂಥವನ್ನು ಕನ್ನಡಭಾಷೆಯಲ್ಲಿ ರಚನೆ ಮಾಡೋಣವಾಗಿದೆ. ಈ ಗ್ರಂಥವನ್ನು ಬುದ್ಧಿವಂತರಾದ ವಿದ್ಯಾರ್ಥಿಗಳು ಓದಿ ಅರ್ಥವನ್ನು ನೆಟ್ಟಗೆ ಗ್ರಹಿಸಿ ಅದರಂತೆ ಆಚರಣೆಮಾಡಿ ಭಗವದನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

20. ಈ ಗ್ರಂಥವನ್ನು ದ್ರವ್ಯಾಕಾಂಕ್ಷೆಯಿಂದ ರಚನೆಮಾಡಿದ್ದಲ್ಲ. ಶ್ರೀಪರಮಾತ್ಮನ ಪ್ರೀತ್ಯರ್ಥವಾಗಿ ರಚಿಸಲ್ಪಟ್ಟಿದ್ದು, ಈ ಗ್ರಂಥವನ್ನು ಸಮಸ್ತರೂ ಸಮೀಚೀನವಾಗಿ ಪಾಠಮಾಡಿ; ಸಂಧ್ಯಾವಂದನಾದಿಗಳನ್ನು ಸಕಾಲದಲ್ಲಿ ಆಚರಿಸಿ ಬ್ರಾಹ್ಮಣ್ಯಾಭಿವೃದ್ಧಿ ಮಾಡಿದರೆ ನನ್ನ ಶ್ರಮವು ಸಫಲವಾಗುತ್ತದೆಂದು ಎಣಿಸುತ್ತೇನೆ. ಇದರಲ್ಲಿ ಬಹುಪ್ರಮಾಣಗಳು ಉದಾಹೃತವಾಗಿವೆ. ಈ ಋಗ್ವೇದ ಸಂಧ್ಯಾವಂದನೆಯ ಬೆಲೆ ಇದುವರೆಗೆ ಇದ್ದುದಕ್ಕಿಂತಲೂ ಈಗ ಸ್ವಲ್ಪ ಹೆಚ್ಚುಮಾಡಿದೆ. ಕಾರಣವೇನೆಂದರೆ, ಇದುವರೆಗೆ ಛಾಪಾ ಹಾಕಿದ ಅಕ್ಷರಗಳು ಬಹಳಸಣ್ಣದಾಗಿ ಇದೆಯೆಂತಲೂ; ಆದರಿಂದ ಓದುವವರ ಕಣ್ಣಿಗೆ ವಿಶೇಷಶ್ರಮ- ವಾಗುತ್ತದೆಂತಲೂ ; ಸಂಹಿತಾ ಒಂದು ಪ್ರದೇಶದಲ್ಲಿಯೂ ವ್ಯಾಖ್ಯಾನ

ಮತ್ತೊಂದು ಪ್ರದೇಶದಲ್ಲಿಯೂ ಇರುವುದರಿಂದ ತೀವ್ರದಲ್ಲಿ ಅರ್ಥವಾಗುವುದಿಲ್ಲವಾದುದರಿಂದ ಸಂಹಿತಾಕ್ಕೆ ಕೆಳಗೆಯೇ ಅದರ ವ್ಯಾಖ್ಯಾನ ಇದ್ದರೆ ಸುಲಭವಾಗಿ ತಿಳಿಯುತ್ತ- ದೆಂದು ಅನೇಕಮಂದಿ ಅಭಿಪ್ರಾಯಕೊಟ್ಟದ್ದರಿಂದ ಆ ಪ್ರಕಾರ ಛಾಪಾಹಾಕೋಣ ಸ್ವಲ್ಪ ಶ್ರಮವಾದದ್ದಲ್ಲದೇ ಹೆಚ್ಚುಕ್ರಯ ಆದಕಡೆಯಿಂದಲೂ ;

ಇದು ಸಂಹಿತಾ, ಇದು ವ್ಯಾಖ್ಯಾನಯೆಂದು ಸುಲಭವಾಗಿ ತಿಳಿಯೋ ಹಾಗೆ ಸಂಹಿತಾವನ್ನು ದೊಡ್ಡ ಅಕ್ಷರದಿಂದಲೂ ವ್ಯಾಖ್ಯಾನವು ಚಿಕ್ಕ ಅಕ್ಷರದಿಂದಲೂ ಹಾಕಬೇಕೆಂದು ಕೆಲವರು ಕೊಟ್ಟ ಅಭಿಪ್ರಾಯವನ್ನು ಅನುಸರಿಸಿ ಛಾಪಿಸಿದ್ದರಿಂದಲೂ ಹೆಚ್ಚು ವೆಚ್ಚವಾಗಿದ್ದ ದೆಸೆಯಿಂದಲೂ;

ಈ ಸಂಧ್ಯಾವಂದನೆ ಪುಸ್ತಕ ಪ್ರತಿಯೊಬ್ಬ ದ್ವಿಜನಲ್ಲಿಯೂ ಶಾಶ್ವತವಾಗಿರತಕ್ಕದ್ದು ಎಂಬ ಇಚ್ಛೆಯಿಂದ ದಪ್ಪ ಕಾಗದದಲ್ಲಿ ಛಾಪಾಹಾಕಬೇಕೆಂಬುದರಿಂದಲೂ ಅದರ ಬೈಂಡುಕೂಡಾ ಛಲೋ ಆಗಿರಬೇಕೆಂದು ಬಹುಜನ ಪ್ರಾರ್ಥನೆ ಮಾಡಿದ್ದರಿಂದ ಕಾಗದ ದಪ್ಪಗೆ ಇರುವುದರಿಂದಲೂ;

ಈ ಪುಸ್ತಕ ಛಾಪಿಸಲಿಕ್ಕೆ ಕ್ರಯಜಾಸ್ತಿ ಆದ್ದರಿಂದ ತದನುಗುಣವಾಗಿ ಕ್ರಯ ಹೆಚ್ಚುಮಾಡೋಣವಾಗಿದೆ. ಈ ಪ್ರಕಾರ ಛಾಪಾ ಹಾಕುವುದರಲ್ಲಿ ಪತ್ರಸಂಖ್ಯೆ ಬಹಳ ಅಧಿಕವಾಗಿದೆ. ಇದರಲ್ಲಿ ಪ್ರಮಾಣಭಾಗಗಳು ವಿಶೇಷವಾಗಿ ಅಧಿಕವಾಗಿ ಸೇರಿವೆ.

21. ಇದರಲ್ಲಿ ಉದಾಹೃತವಾದ ಪ್ರಮಾಣಗಳು ಸ್ವಕಪೋಲಕಲ್ಪಿತವಾದವುಗಳಲ್ಲ, ಪರಾಶರಸ್ಮೃತಿ, ಮನುಸ್ಮೃತಿ, ನಿರ್ಣಯಸಿಂಧು, ಧರ್ಮಸಿಂಧು, ಧರ್ಮಪ್ರವೃತ್ತಿ , ಸ್ಮೃತ್ಯರ್ಥಸಾಗರ, ಮೊದಲಾದ ಧರ್ಮಶಾಸ್ತ್ರಗಳಿಂದ ಎತ್ತಿಹಾಕಿದ್ದು. ಆಯಾಸ್ಥಳಗಳಲ್ಲಿ ಸಂದರ್ಭಾನುಸಾರವಾಗಿ ಆಯಾಧರ್ಮಶಾಸ್ತ್ರಗಳು ಉದಾಹೃತವಾಗಿವೆ. ಭಗವದಪರೋಕ್ಷಜ್ಞಾನಿಗಳಾದ ಶ್ರೀಟೀಕಾಚಾರ್ಯರು ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನರೂಪವಾದ ಸುಧಾ ಗ್ರಂಥರಚನೆಮಾಡುವ ಕಾಲದಲ್ಲಿ ''ನಶಬ್ದಾಬ್ಧೌ ಗಾಢಾ ನ ಚ ನಿಗಮಚರ್ಚಾಸುಚತುರಾ, ನಚ ನ್ಯಾಯೇಪ್ರೌಢಾ, ನ ಚ ವಿದಿತವೇದ್ಯಾ ಅಪಿ ವಯಂ ॥ ಪರಂ ಶ್ರೀಮತ್ಪೂರ್ಣ ಪ್ರಮತಿಗುರುಕಾರುಣ್ಯಸರಣಿಂ ಮಾನ್ಯಾಃ ಸ್ಮಃ ಕಿಮಪಿ ಚ ವದಂತೋಪಿ ಮಹತಾಂ॥'' ಎಂಬುವ ಶ್ಲೋಕದಿಂದ ಸ್ವಾಹಂಕಾರ- ವನ್ನು ಖಂಡನೆ ಮಾಡಿದ್ದಾರೆ. ಈ ಶ್ಲೋಕಸ್ಥವಾದ ವಾಕ್ಯಗಳು ಆ ಮಹಾನುಭಾವರಲ್ಲಿ ಸರ್ವಥಾ ವ್ಯಾಪಿಸುವುದಿಲ್ಲವೆಂತಲೂ, ಆ ಅಶಕ್ತಿತ್ವ ಗುಣಗಳು ಅವರಲ್ಲಿ ಅನ್ವಯಿಸೋದಿಲ್ಲವೆಂತಲೂ ಅವರು ಮಹಾಸಮರ್ಥರೆಂಬುವುದೂ ಮಹಾಜ್ಞಾನಿಗಳೆಂಬುದೂ, ಸರ್ವರಿಗೂ ವಿದಿತವಾದ ಪ್ರಮೇಯವಾಗಿದೆ. ಆದಕಾರಣ ನಾವುಗಳು ಮತ್ತೆ ಆ ವಿಷಯವನ್ನು ಹೇಳುವುದು ಅನಾವಶ್ಯಕ. ಅಂಥಾ ಸ್ಥಿತಿಯಲ್ಲಿ ಅವರು ಈ ವಾಕ್ಯಗಳನ್ನು ಯಾವ ಕಾರಣದಿಂದ ಪ್ರಯೋಗಮಾಡಿದ್ದಾರೆಂದು ಆಲೋಚನೆ ಮಾಡಿ ನೋಡಲಾಗಿ ಲೋಕದಲ್ಲಿ ಶಿಷ್ಯಶಿಕ್ಷಾರ್ಥವಾಗಿ ಮಾಡಿದ್ದಾರೆಂಬುದು ತೋರುತ್ತದೆ.

22. ಈ ವಾಕ್ಯಗಳು ಸರ್ವವೂ ಮೂಢಮತಿಯಾದ ನನ್ನಲ್ಲಿ ಒಂದಾದರೂ ಲೋಪವಿಲ್ಲದಂತೆ ಈ ಗ್ರಂಥವನ್ನು ರಚನೆ ಮಾಡುವ ವಿಷಯಕ್ಕೆ ಪ್ರಯತ್ನಪಡುವ ನನ್ನಲ್ಲಿ ವ್ಯಾಪಿಸುತ್ತವೆ. ನಾನು ವೈದಿಕ ವ್ಯಾಸಂಗ ಮಾಡಿದವನಲ್ಲ, ವ್ಯಾಕರಣ ಶಾಸ್ತ್ರಸ್ವಲ್ಪವಾದರೂ ತಿಳಿಯದು. ಶಬ್ದಪ್ರಯೋಗಗಳೂ ಪದ-ಸಮಾಸಗಳೂ ದೂರತೋಪಾಸ್ತ. ಶಾಸ್ತ್ರಜನ್ಯಜ್ಞಾನ ಸ್ವಲ್ಪವಾದರೂ ಇಲ್ಲ, ಆದಾಗ್ಯೂ ಗುರುಮುಖದಿಂದ ಶ್ರವಣಮಾಡಿ ತಿಳಿದುಕೊಂಡ ಪ್ರಮೇಯಗಳು ಅಸ್ಮದ್ಗುರುವರರ ಪರಮಾನುಗ್ರಹದಿಂದ ಜ್ಞಾಪಕದಲ್ಲಿಟ್ಟುಕೊಂಡು ಅವುಗಳನ್ನು ಅವರ ಅಪ್ಪಣೆತೆಗೆದುಕೊಂಡು ಮುದ್ರಿಸಲಾಗಿದೆ. ಅವರ ಪರಮಾನುಗ್ರಹವಿನಹ ಒಂದು ಶಬ್ದವಾದರೂ ಹೇಳಲು ನಾನು ಸ್ವತಃ ಶಕ್ತನಲ್ಲ, ನಾನು ಅಲ್ಪಜ್ಞನು. ಸಂಸ್ಕೃತ ಕನ್ನಡಭಾಷಾಗಳಜ್ಞಾನವಿಲ್ಲ, ನಾನು ಇಂಥಾ ದೊಡ್ಡ ಪ್ರಯತ್ನವನ್ನು ಮಾಡೋಣ ಹಾಸ್ಯಾಸ್ಪದವಾಗಿರುತ್ತದೆ. ಆದರೂ ಸೇತುಬಂಧನ ಕಾಲದಲ್ಲಿ ಶ್ರೀರಾಮಚಂದ್ರದೇವರಿಗೆ ಸಹಾಯಮಾಡಬೇಕೆಂಬ ಉದ್ದೇಶದಿಂದ ಅಳಿಲೆಂಬುವ ಅಲ್ಪಕೀಟಪ್ರಾಯಜಂತುವು ಮಾಡಿದ ಕಾರ್ಯವು ರಾಮಾಯಣದಲ್ಲಿ ಕಂಡಂತೆ ಈ ನನ್ನ ಪ್ರಯತ್ನಕೂಡಾ ಏತತ್ಪೂರ್ವದಲ್ಲಿ ವಿದ್ವಾಂಸರಿಂದ ಅನೇಕವಿಧವಾಗಿ ರಚಿಸಲ್ಪಟ್ಟ ಭಾಷ್ಯಗಳನ್ನು ಓದುವವರಿಗೆ ಇದೂಸಹಿತ ಕಿಂಚಿತ್ತಾದರೂ ಸಹಾಯಭೂತ- ವಾಗಿರಬಹುದೆಂಬೋ ನಂಬಿಕೆಯಿಂದ ಮಾಡೋಣವಾಗಿದೆ. ಯದ್ಯಪಿ ಲೋಕದಲ್ಲಿ ಗ್ರಂಥಗಳಿಗೆ ದೋಷಗಳನ್ನು ಕಲ್ಪನೆ ಮಾಡತಕ್ಕ ದುರ್ಜನರು ಅನೇಕಜನರಿದ್ದಾರೆ. ಆದರೂ ಈ ನನ್ನ ಪ್ರಯತ್ನವನ್ನು ಕುರಿತು ಅನಸೂಯಾಪರರಾದ ಮಹಾನುಭಾವರುಗಳು ದುರಭಿಮಾನ ರಹಿತರಾದ ಪಂಡಿತೋತ್ತಮರು ಹರ್ಷಿಸಿ ಹಂಸಕ್ಷೀರೋದಕನ್ಯಾಯದಿಂದ ಇದರಲ್ಲಿರುವ ಸಮೀಚೀನ ಅರ್ಥಗಳನ್ನು

ಮಾತ್ರವೇ ಗ್ರಹಿಸಿ ಕಾಣಬರತಕ್ಕ ತಪ್ಪುಗಳನ್ನು ಕ್ಷಮಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಆ ತಪ್ಪುಗಳನ್ನು ನನಗೆ ದಯಮಾಡಿ ತಿಳಿಸಿದ ಪಕ್ಷದಲ್ಲಿ ಪುನರಾವರ್ತಿಯಲ್ಲಿ ಸರಿಮಾಡಲ್ಪಡುವುದು.

23. ಈ ಗ್ರಂಥರಚನೆಯಲ್ಲಿ ಶ್ರೀಮದ್ವಶಾಸ್ತ್ರಸಂಪನ್ನರಾದ ವೇದಮೂರ್ತಿಗಳಾದ, ಶತಾವಧಾನಿಗಳಾದ, ಅಸದೃಶ- ಪಾಂಡಿತ್ಯವುಳ್ಳ ತಿರುವಾದ ಲಕ್ಷ್ಮಣಾಚಾರ್ಯರವರು ನನಗೆ ಬಹುವಿಧವಾದ ಸಹಾಯಮಾಡಿದ್ದಾರೆ. ನಾನು ಬರೆದ ಪ್ರತಿಶ್ಲೋಕವು, ಪ್ರತಿಶಬ್ದಾರ್ಥವು, ಪ್ರತಿಅಭಿಪ್ರಾಯವು, ಪ್ರತಿಪದಚ್ಛೇದವು ಅವರುಗಳು ನನ್ನ ಮೇಲೆ ಸಂಪೂರ್ಣ ಅಭಿಮಾನದಿಂದ ಬಹುಸಮೀಚೀನವಾಗಿಯೂ ಆದರದಿಂದಲೂ ನೋಡಿ ಪರಿಷ್ಕಾರ ಮಾಡಿದ್ದಾರಾದ್ದರಿಂದ ಈ ಗ್ರಂಥದಲ್ಲಿ ಪ್ರಾಯಶಃ ತಪ್ಪುಗಳು ಇರಲಾರದೆಂಬ ಧೈರ್ಯವುಂಟಾಗಿ ಅಚ್ಚುಹಾಕಿಸಲ್ಪಟ್ಟಿದೆ. ಆ ಆಚಾರ್ಯಶಿಖಾಮಣಿಗಳು ನನಗೆ ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಲಿಕ್ಕೆ ಶಕ್ತತಾ ಇಲ್ಲದೇ ಹೋದ ದೆಸೆಯಿಂದ ''ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ'' ಎಂಬ ನ್ಯಾಯಾನುಸಾರವಾಗಿ ಅವರ ಪಾದ ಸರೋಜಗಳಿಗೆ ಮನಃ ಪೂರ್ತಿಯಾಗಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಾ ಅವರ ಆಜ್ಞಾ ತೆಗೆದುಕೊಂಡು ಈ ಗ್ರಂಥವನ್ನು ಅಚ್ಚುಹಾಕಿಸಲಿಕ್ಕೆ ಪ್ರಯತ್ನಪಟ್ಟಿದ್ದೇನು. ಈ ಆಚಾರ್ಯ ಮಹಾನುಭಾವರಿಗೆ ನಾನು ಮ್ಯಾಲಕಂಡ ಪ್ರಕಾರ ಶ್ರಮಕಲ್ಪನೆ ಮಾಡಿದ್ದಕ್ಕೆ ಅವರ ಕ್ಷಮಾಪಣೆ ಪ್ರಾರ್ಥಿಸುತ್ತಾ ಪುನಃಪುನಃ ವಂದನೆಗಳನ್ನು ಮಾಡುತ್ತೇನೆ.

24. ಈ ಗ್ರಂಥಕ್ಕೆ ಋಕ್ಶಾಖಾ ಸಂಧ್ಯಾವಂದನೆ ಭಾಷ್ಯಪ್ರಶ್ನೋತ್ತರಾವಲಿ ಎಂಬ ನಾಮವನ್ನು ಇಟ್ಟು ಅಸ್ಮದ್ಗುರುವರರಾದ ಶ್ರೀಮದ್ವಶಾಸ್ತ್ರಸಂಪನ್ನರಾದ ವೇದಮೂರ್ತಿಗಳಾದ ಹರಪನಹಳ್ಳಿವಾಸಿಗಳಾದ ಶ್ರೀಭಕ್ರಿವೆಂಕೋಬಾಚಾರ್ಯರ ವರಪಾದ-ಸರೋಜಗಳಿಗೆ ಗುರುದಕ್ಷಿಣಾವತ್ ಸಮರ್ಪಣೆಮಾಡಲ್ಪಟ್ಟಿದೆ.

25. ಈ ಸಂಧ್ಯಾವಂದನ ಪ್ರಶ್ನೋತ್ತರಾವಳಿ ಪ್ರಥಮ ಆವರ್ತಿಯಾದ ಪುಸ್ತಕಗಳನ್ನು ನೋಡಿ ಓದಿ ಪಾಠಮಾಡಿದ ಬಹುಜನ ಲೌಕಿಕವೈದಿಕಜನರು ಈ ಪುಸ್ತಕದ ಉಪಯೋಗದ ವಿಷಯವನ್ನು ಕುರಿತು ನನ್ನ ಹೆಸರಿನಲ್ಲಿ ಬಹುಪತ್ರಗಳು ಬರೆದಿದ್ದಾರೆ. ಬಹುಮಂದಿ ವಿದ್ವಾಂಸರಿಗೂ ಕೂಡ ಈ ಪುಸ್ತಕವನ್ನು ತೋರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡಾಗಿದೆ. ಬಹುಜನ ವಿದ್ವಾಂಸರು ಆ ಗ್ರಂಥದಲ್ಲಿ ಕಾಣಬರತಕ್ಕ ಲೋಪಗಳನ್ನು ತಿಳಿಸಿ ಸಪ್ರಮಾಣಗಳಿಂದ ಅವುಗಳನ್ನು ತಿದ್ದಿ ಕಳಿಸಿದ್ದಾರೆ. ಅವರುಗಳು ಬರೆದು ಕಳಿಸಿದ, ಸಮಕ್ಷಮದಲ್ಲಿ ತಿಳಿಸಿದ ಅಭಿಪ್ರಾಯಗಳನ್ನು ಪ್ರಮಾಣಗಳಿಂದ ಶೋಧನೆಮಾಡಿ ಅವಶ್ಯಬಿದ್ದ ಕಡೆ ಅಂಗೀಕಾರಮಾಡತಕ್ಕ ಅಂಶಗಳನ್ನು ಅಂಗೀಕರಿಸಿ ಆಯಾಸ್ಥಳಗಳಲ್ಲಿ ಸಂದರ್ಭಾನುಸಾರ ಅವುಗಳಿಗೆ ಈ ದ್ವಿತೀಯಾವೃತ್ತಿಯಲ್ಲಿ ಸೇರಿಸಿ ಮುದ್ರಣಮಾಡಿಸಿದ್ದಿದೆ.

26. ಮತ್ತು ಕೆಲವರು ಲೌಕಿಕವೈದೀಕರು ಈ ಸಂಧ್ಯಾವಂದನ ಪ್ರಶ್ನೋತ್ತರಾವಳಿ ಪುಸ್ತಕವನ್ನು ನೋಡಿ ಅದರ ಉಪಯೋಗ- ವನ್ನು ಕುರಿತು ಬಹುವಿಧಶ್ಲಾಘನವನ್ನು ಮಾಡಿ ತಮ್ಮಸಹಿಯಜೊತೆಗೆ ಪತ್ರಗಳನ್ನು ಕಳಿಸಿದ್ದಾರೆ. ಅವೆಲ್ಲಾ ಈ ಪುಸ್ತಕದಲ್ಲಿ ಅಚ್ಚು ಹಾಕೋಣ ಅನಾವಶ್ಯಕವಾದ್ದರಿಂದ ಅವುಗಳನ್ನು ಇಲ್ಲಿ ಸೇರಿಸಿಲ್ಲ, ನಾವು ಶ್ರಮತೆಗೆದುಕೊಂಡು ಬರೆದ ಪುಸ್ತಕ ನಮ್ಮ ಇಷ್ಟಮಿತ್ರರಿಗೆ ಉಪಯೋಗವಾಗಿದ್ದು ನೋಡಿ ಬಹಳ ಸಂತೋಷವಾಯಿತು.

27. ಈ ಪ್ರಕಾರ ಈ ಗ್ರಂಥದಲ್ಲಿ ಸಮೀಚೀನವಾದ ಆಸಕ್ತಿ ತೆಗೆದುಕೊಂಡು ಶುದ್ಧಾಂತಃಕರಣದಿಂದ ಗ್ರಂಥಾಭಿವೃದ್ಧ್ಯರ್ಥ ವಾಗಿಯೂ ಶ್ಲಾಘನರೂಪವಾಗಿಯೂ ಪತ್ರಗಳನ್ನು ಬರೆದು ಕಳುಹಿಸದ ಸಮಸ್ತ ಲೌಕಿಕ ವೈದಿಕರಿಗೆ ನಮ್ಮ ವಂದನಾದಿಗಳು ಸಾಷ್ಟಾಂಗ ನಮಸ್ಕಾರರೂಪವಾಗಿ ಮಾಡೋಣವಾಗುತ್ತದೆ.

28. ಅವರ ಪೈಕಿ ಅಸ್ಮದ್ಗುರುವರರಾದ ವೇದಮೂರ್ತಿ ಶ್ರೀಮದ್ವಶಾಸ್ತ್ರಸಂಪನ್ನರಾದ ಭಕ್ರಿವೆಂಕೋಬಾಚಾರ್ಯರ ಪಾದಸರೋಜಗಳಿಗೂ, ಅಸ್ಮನ್ಮಾನ್ಯಮಿತ್ರರಾದ ದಿವಾನ್ ಬಹಾದ್ದೂರ್ ಮಹಾರಾಜ ಶ್ರೀಅನಂತಶಯನಮಹಾರಾಜರ ಪಿಂಛಿನ್‌ದಿವಾನರಾದ ಕಂಚಿಕೃಷ್ಣಸ್ವಾಮಿರಾಯರಿಗೂ, ತಿರುಕೊಯಿಲೂರುವಾಸಿಗಳಾದ ಪಿಂಚಿನ್ ಡಿಸ್ಟ್ರಿಕ್ಟ್ ಮುನಿಸೀಫರಾದ ಮಹಾರಾಜಶ್ರೀವಲ್ಲಂ ನಾರಾಯಣರಾಯರಿಗೂ, ಕರ್ನೂಲು ವಾಸಿಗಳಾದ ಮಹಾರಾಜ ಶ್ರೀಶಾಂಜೀ ಆನಂದರಾಯರಿಗೂ ವಿಶೇಷಕಾರವಾಗಿ ನಮಸ್ಕಾರಗಳನ್ನು ಮಾಡೋಣವಾಗುತ್ತದೆ.

ಇತಿ ಸುಜನವಿಧೇಯನಾದ,

ಗುರುರಾಜಾ ವೆಂಕೋಬ ಕವುಕೂರುಕರ್.

(ಈ ಗ್ರಂಥದ ಜೊತೆಗೆ ಬರೆದಿರುವ ಸಂಧ್ಯಾಭಾಷ್ಯವೆಂಬ ಪುಸ್ತಕವು ಶ್ರೀಮಾಧವಾಚಾರ್ಯರೆಂಬ ಪುಣ್ಯಜೀವಿಗಳಿಂದ ಹಸ್ತಪ್ರತಿಮಾಡಲ್ಪಟ್ಟಿದ್ದು, ಶ್ರೀಶ್ರೀ ಸತ್ಯಾಧಿರಾಜ ತೀರ್ಥರ ಶಿಷ್ಯರಾದ ಮಹಾನುಭಾವರಾದ ಶ್ರೀತಿಮ್ಮಣ್ಣಾಚಾರ್ಯರೆಂಬುವರಿಂದ ನಿರ್ಮಿತವಾಗಿದೆ.)

॥ಶ್ರೀಮಧ್ವಾಂತರ್ಯಾಮಿನ್ ಶ್ರೀನಿವಾಸ ಪ್ರಸನ್ನ॥

ಋಕ್‌ಶಾಖಾ ಸಂಧ್ಯಾವಂದನ ಪ್ರಶ್ನೋತ್ತರಾವಳಿ:-

ಪ್ರ.) ಸಂಧ್ಯಾವಂದನೆ ಎಂದರೆ ಏನು?

ಉ:- ಸಂಧ್ಯಾ(ಸಂಧಿ)ಕಾಲಗಳಲ್ಲಿಸೂರ್ಯಾಂತರ್ಗತ ಸೂರ್ಯನಿಯಾಮಕ ಶ್ರೀಮಧ್ವಾಂತರ್ಯಾಮಿನ್ ಶ್ರೀಲಕ್ಷ್ಮೀನಾರಾಯಣಾತ್ಮಕ ಪರಮಾತ್ಮನಿಗೆ ವಂದನಾದಿಗಳು ಮಾಡುವ ಕಾರ್ಯಕ್ಕೆ ಸಂಧ್ಯಾವಂದನೆ ಎಂದು ಹೆಸರು.

**ಪ್ರ.)** ಸಂಧ್ಯಾ (ಸಂಧಿ)ಕಾಲವೆಂದರೆ ಏನು ? ಅದರ ಸ್ವರೂಪ ಹೇಳಿರಿ.

ಉ:- ''ಅಹೋರಾತ್ರಸ್ಯ ಯಸ್ಸಂಧಿ ಸ್ಸೂರ್ಯನಕ್ಷತ್ರವರ್ಜಿತಃ । ಸಾ ತು ಸಂಧ್ಯಾಸಮಾಖ್ಯಾತಾ ಮುನಿಭಿಸ್ತತ್ವದರ್ಶಿಭಿಃ॥'' ಎಂದು ಪರಾಶರಸ್ಮೃತಿಯಲ್ಲಿಹೇಳುತ್ತದೆ. 'ಸಂಧೌ ಸಂಧ್ಯಾಮುಪಾಸೀತ ನಾಸ್ತಗೇನೋದ್ಗತೇ ರವೌ'' ಯೆಂದು ಯೋಗಯಾಜ್ಞವಲ್ಕ್ಯಸ್ಮೃತಿಯಲ್ಲಿ ಹೇಳುತ್ತದೆ. ಆದಕಾರಣ ಹಗಲು ರಾತ್ರಿಗಳ ಸಂಧಿಕಾಲವಾಗಿದ್ದು ಸೂರ್ಯನಕ್ಷತ್ರರಹಿತವಾದ ಕಾಲಕ್ಕೆ ಸಂಧ್ಯಾಕಾಲವೆಂದು ಜ್ಞಾನಿಗಳು ಕರೆಯುತ್ತಾರೆ ಎಂದು ಅರ್ಥವೆಂದೂ, ಸೂರ್ಯರಹಿತವಾದ ಪ್ರಾತಃ ಕಾಲಕ್ಕೂ ನಕ್ಷತ್ರರಹಿತವಾದ ಮಧ್ಯಾನ್ಹ ಸಾಯಂಕಾಲಗಳಿಗೂ ಸಂಧ್ಯಾಕಾಲಗಳೆಂದು ಹೆಸರು.

ಪ್ರ) ಇದರಿಂದ ಆ ಕಾಲಗಳಿಗೆ ಸಂಧ್ಯಾಕಾಲವೆಂದು ಹೇಳಿದಹಾಗೆ ಆಯಿತು. ಆ ಕಾಲಗಳಲ್ಲಿ ಮಾಡುವ ಭಗವತ್ಪೂಜಾಕ್ಕೆ ಸಂಧ್ಯಾವಂದನೆ ಎಂದು ಕರೆಯಲಿಕ್ಕೆ ಪ್ರಮಾಣವೇನು ?

ಉ:- ಈ ಸ್ಥಳದಲ್ಲಿ ಸಂಧ್ಯಾಶಬ್ದ ಕಾಲವಾಚಕದಂತೆ ಕಾಣಬರುತ್ತದೆ ಹೊರತು ವಾಸ್ತವವಾಗಿ ಆ ಅಭಿಪ್ರಾಯದಿಂದ ಹೇಳಿದ ಪ್ರಮಾಣವಲ್ಲ. ಆ ಕಾಲಗಳಲ್ಲಿ ಉಪಾಸ್ಯರಾದ ದೇವತಾಗಳು ಸಂಧ್ಯಾಶಬ್ದದಿಂದ ಉಪಲಕ್ಷಿತರಾಗುತ್ತಾರೆ. ಮತ್ತು ''ಉಪಾಸ್ತೇ ಸಂಧ್ಯಾವೇಲಾಯಾಂ ನಿಶಾಯಾದಿವಸಸ್ಯ ಚ । ತಾಮೇವ ಸಂಧ್ಯಾಂ ತಸ್ಮಾತ್ತು ಪ್ರವದಂತಿ ಮನೀಷಿಣಃ ।'' ಎಂದು ವ್ಯಾಸಸ್ಮೃತಿಯಲ್ಲಿ ಹೇಳುತ್ತದೆಯಾದ ಕಾರಣದಿಂದ ಹಗಲುರಾತ್ರಿಗಳ ಸಂಧಿಕಾಲಗಳಲ್ಲಿ ಭಗವದುಪಾಸನೆ ಮಾಡತಕ್ಕ ಜ್ಞಾನಿಗಳು ಸಂಧ್ಯಾವಂದನೆ ಎಂದು ಕರೆಯುತ್ತಾರೆ.

ಪ್ರ) ವೇದದಲ್ಲಿ ಏನು ಹೇಳುತ್ತದೆ?

ಉ:- ''ಅಹರಹಸ್ಸಂಧ್ಯಾಮುಪಾಸೀತ'' ''ಯಃ ಸಂಧ್ಯಾಮುಪಾಸತೇ। ಬ್ರಹ್ಮೇವತದುಪಾಸತೇ'' ಎಂದು ಹೇಳಿರುವಕಾರಣ ಪ್ರತಿನಿತ್ಯವೂ ತಪ್ಪದಂತೆ ಸಂಧ್ಯಾವಂದನೆಯನ್ನು ಮಾಡತಕ್ಕದ್ದು ಎಂದು ಅಭಿಪ್ರಾಯ.

ಪ್ರ) ಮೇಲೆ ಹೇಳಿದ ಸಂಧ್ಯಾಕಾಲಗಳು ಯಾವುವು. ಅವುಗಳ ಸಂಖ್ಯಾ ಎಷ್ಟು?

ಉ:- ಸಾಧಾರಣವಾಗಿ ರಾತ್ರಿಹಗಲಿಗೆ ಸಂಧಿಕಾಲವೆಂದು ಒಂದು. ಹಗಲಿಗೆರಾತ್ರಿಗೆ ಸಂಧಿಕಾಲ ಮತ್ತೊಂದು . ಈ ಪ್ರಕಾರ ಎರಡು ಸಂಧಿ ಕಾಲಗಳುಂಟು. ಮತ್ತೊಂದು ಪ್ರಕಾರದಿಂದ ಸಂಧಿಕಾಲಗಳುಂಟು. ಆದರೆ, ಸಂಧ್ಯಾವಂದನಕ್ಕೆ ಪ್ರಾತರ್ಮಧ್ಯಾನ್ಹಸಾಯಂಕಾಲಗಳೆಂಬ ಮೂರು ಸಂಧಿಕಾಲಗಳೇ ಮುಖ್ಯವಾದದ್ದು.

ಪ್ರ) ಆ ಪ್ರಕಾರವಿದ್ದರೆ ಪ್ರತಿನಿತ್ಯ ಸಂಧ್ಯಾವಂದನೆ ಎಷ್ಟು ಆವರ್ತಿಮಾಡತಕ್ಕದ್ದು?

ಉ:- ಪ್ರತಿನಿತ್ಯ ಸಂಧ್ಯಾವಂದನೆ ಮೂರಾವರ್ತಿ ಮಾಡಬೇಕು.

ಪ್ರ) ಅವುಗಳ ಹೆಸರು ಏನು?

ಉ:- ಪ್ರಾತಸ್ಸಂಧ್ಯಾವಂದನ॥ ಮಾಧ್ಯಾನ್ಹಿಕ ಸಂಧ್ಯಾವಂದನ॥ ಸಾಯಂಸಂಧ್ಯಾವಂದನ॥ ಎಂದು ಹೆಸರು.

ಪ್ರ) ಸಂಧ್ಯಾವಂದನೆಗಳನ್ನು ಪ್ರಥಮದಲ್ಲಿ ಯಾರು ಯಾವ ಉದ್ದೇಶದಿಂದ ಸೃಷ್ಟಿಮಾಡಿದರು ?

ಉ:- '' ಯಾವಂತೋಸ್ಯಾಂ ವಿಕರ್ಮಸ್ಥಾಃ ಪೃಥಿವ್ಯಾಂ ಬಾಲಿಶಾದ್ವಿಜಾಃ । ತೇಷಾಂ ಪಾವಿತ್ರ್ಯಸಿದ್ಧ್ಯರ್ಥಂ । ಸಂಧ್ಯಾಸೃಷ್ಟಾ ಸ್ವಯಂಭುವಾ।'' ಎಂದು ಪ್ರಮಾಣವಿರುವುದರಿಂದ ಪೃಥಿವಿಯಲ್ಲಿ ವಿಕರ್ಮಸ್ಥರಾದ (ವಿಹಿತಕರ್ಮವನ್ನು ಬಿಟ್ಟ) ಅಜ್ಞಾನಿಗಳಾದ ದ್ವಿಜರ ಪಾವಿತ್ರ್ಯತಾಗೋಸ್ಕರ (ಅಂಥಾವರು ಸದ್ಗತಿಯನ್ನು ಹೊಂದಲಿಕ್ಕೆ )ಗುಣಪೂರ್ಣನಾದ ಪರಮಾತ್ಮನು ಸಂಧ್ಯಾವಂದನೆಯನ್ನು ಕಲ್ಪನೆ ಮಾಡಿದನೆಂದರ್ಥ।

ಪ್ರ) ಈ ಸಂಧ್ಯಾವಂದನೆ ಪ್ರತಿಪಾದ್ಯ ಗಾಯತ್ರೀಮಂತ್ರವನ್ನು ಮೊದಲು ಯಾರು ಯಾರಿಗೆ ಉಪದೇಶಮಾಡಿದರು ?

ಉ:- ಮೊದಲು ಗುಣಪೂರ್ಣನಾದ ಪರಮಾತ್ಮನು ಸೃಷ್ಟಿಕಾಲದಲ್ಲಿ ಬ್ರಹ್ಮದೇವರಿಗೆ ಉಪದೇಶ ಮಾಡಿದನು.

ಪ್ರ) ಈ ಪ್ರಕಾರ ಮೂರಾವರ್ತಿ ಸಂಧ್ಯಾವಂದನೆಗಳನ್ನು ಮಾಡಲಿಕ್ಕೆ ಪ್ರಮಾಣಗಳೇನು ?

ಉ:- ' ಸಾ ಚ ಸಂಧ್ಯಾತ್ರಿವಿಧಾ'' ಎಂದು ಪರಾಶರಸ್ಮೃತಿಯಲ್ಲಿ ಹೇಳುತ್ತದೆ. ಆ ಸಂಧ್ಯಾ ಎಂಬುವುದು ಮೂರುವಿಧವಾದದ್ದು ಎಂದು ಅರ್ಥ. ''ಸಂಧ್ಯಾತ್ರಯಂ ತು ಕರ್ತವ್ಯಂ ದ್ವಿಜೇನಾತ್ಮವಿದಾಸದಾ'' ಎಂದು ಅತ್ರಿಸ್ಮೃತಿಯಲ್ಲಿ ಹೇಳುತ್ತದೆ. ಜ್ಞಾನಿಗಳಾದ ದ್ವಿಜನ್ಮರಿಂದ ಸಂಧ್ಯಾವಂದನೆಯು ಮೂರಾವರ್ತಿಮಾಡತಕ್ಕದ್ದೆಂದು ಅರ್ಥ.

ಪ್ರ) ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲಿ ಪೂರ್ವಾಂಸಂಧ್ಯಾಂ ಸನಕ್ಷತ್ರಾಂ ಉತ್ತರಾಂ ಸದಿವಾಕರಾಂ'' ಎಂದು ಎರಡಾವರ್ತಿ ಮಾತ್ರವೇ ಹೇಳಿದಂತೆ ಕಾಣುತ್ತದಲ್ಲವಾ ?

ಉ:- ಆ ವಾಕ್ಯಕ್ಕೆ ಅರ್ಥ ಅದಲ್ಲ, ಶ್ರೀಮದಾಚಾರ್ಯರು ಸಂಧ್ಯಾವಂದನೆಗಳು ಎರಡು ಎಂದು ಹೇಳಲಿಲ್ಲ, ಕಾಲವಾಚಕ ಪ್ರಮೇಯದಲ್ಲಿ ಹೇಳಿದ್ದು . ಪೂರ್ವಾಂ ಸಂಧ್ಯಾಂ= ಪ್ರಾತಸ್ಸಂಧ್ಯಾವಂದನೆಯನ್ನು , ಸ ನಕ್ಷತ್ರಾಂ=ನಕ್ಷತ್ರಸಹಿತವಾಗಿಯೂ, ಉತ್ತರಾಂ (ಸಂಧ್ಯಾಂ) ತರುವಾಯದಲ್ಲಿ ಮಾಡತಕ್ಕ ಮಧ್ಯಾನ್ಹ ಸಾಯಂಕಾಲ ಸಂಧ್ಯಾವಂದನೆಗಳು, ಸದಿವಾಕರಾಂ= ಸೂರ್ಯಸಹಿತವಾಗಿಯೂ ಮಾಡಬೇಕೆಂದು ಅವರ ಅಭಿಪ್ರಾಯ. ''ಉತ್ತರಾಂ'' ಎಂಬುವ ಪದಕ್ಕೆ ''ತರುವಾಯದಲ್ಲಿ ಮಾಡುವ'' ಎಂಬ ಅರ್ಥವೇ ಹೊರತು ''ಮತ್ತೊಂದು'' ಎಂಬ ಅರ್ಥವಲ್ಲ.

ಪ್ರ) ಮೂರುಸಂಧ್ಯಾವಂದನೆಗಳು ಕಾಲಭೇದದಿಂದ ಪ್ರತ್ಯೇಕದೇವತಾ( ಪರಮಾತ್ಮನ) ನಾಮಗಳ ದೆಸೆಯಿಂದ ಮಾಡತಕ್ಕದ್ದೋ ಅಥವಾ ಒಂದೇ ದೇವತಾನಾಮಕವಾದವುಗಳೋ ?

ಉ:- ಕಾಲಭೇದದಿಂದ ದೇವತಾನಾಮಗಳು ಪ್ರತ್ಯೇಕವಿವೆ.

'' ಗಾಯತ್ರೀನಾಮ ಪೂರ್ವಾನ್ಹೇ । ಸಾವಿತ್ರೀ ಮಧ್ಯಮೇದಿನೇ । ಸರಸ್ವತೀ ಚ ಸಾಯಾನ್ಹೇ । ಸೈವಸಂಧ್ಯಾ ತ್ರಿಧಾ ಸ್ಮೃತಾ ॥'' ಎಂದು ಪರಾಶರಸ್ಮೃತಿಯಲ್ಲಿ ಪ್ರಮಾಣವಿರುವುದರಿಂದ ಪ್ರಾತಸ್ಸಂಧ್ಯಾವಂದನ ಗಾಯತ್ರೀನಾಮಕ ಅಥವಾ ಗಾಯತ್ರೀನಿಯಾಮಕ ಪರಮಾತ್ಮನ ಪ್ರೀತ್ಯರ್ಥವಾಗಿಯೂ; ಮಧ್ಯಾನ್ಹ ಸಂಧ್ಯಾವಂದನೆಯು ಸಾವಿತ್ರೀನಾಮಕ ಅಥವಾ ಸಾವಿತ್ರೀ ನಿಯಾಮಕ ಪರಮಾತ್ಮನ ಪ್ರೀತ್ಯರ್ಥವಾಗಿಯೂ; ಸಾಯಂ ಸಂಧ್ಯಾವಂದನೆಯು ಸರಸ್ವತೀ ನಾಮಕ ಅಥವಾ ಸರಸ್ವತೀನಿಯಾಮಕ ಪರಮಾತ್ಮನ ಪ್ರೀತ್ಯರ್ಥವಾಗಿಯೂ ಮಾಡಬೇಕೆಂದು ಅಭಿಪ್ರಾಯವಾಗುತ್ತದೆ. ''ಗಾಯತ್ರೀಚೈವಸಾವಿತ್ರೀ ತಥೈವ ಚ ಸರಸ್ವತೀ । ಸಂಧ್ಯಾತ್ರಯೇ ಚ ವಿಜ್ಞೇಯಾ ದೇವತಾವಿಷ್ಣ್ವಧಿಷ್ಠಿತಾಃ ।''ಎಂಬ ಮತ್ತೊಂದು ಪ್ರಮಾಣಪದಕದಿಂದ ವಿಷ್ಣುಅಧಿಷ್ಠಿತವಾದ ಮೇಲ್ಕಂಡ ಮೂರುದೇವತಾ ನಿಯಾಮಕ ಪರಮಾತ್ಮನ ಪ್ರೀತ್ಯರ್ಥವಾಗಿ ಮೂರುಸಂಧ್ಯಾವಂದನೆಗಳು ಪ್ರತಿನಿತ್ಯಮಾಡತಕ್ಕದ್ದು.

ಪ್ರ) ಆ ಪ್ರಕಾರವಾದರೆ ಗಾಯತ್ರೀ, ಸಾವಿತ್ರೀ ಸರಸ್ವತೀಶಬ್ದಗಳಿಗೆ ಅರ್ಥವೇನು ?

ಉ:- ''ಪ್ರತಿಗ್ರಹಾಪನ್ನ ದೋಷಾತ್ಪಾತಕಾದುಪಪಾತಕಾತ್ । ಗಾಯತ್ರೀ ಪ್ರೋಚ್ಯತೇ ತಸ್ಮಾದ್ಗಾಯಂತಂ ತ್ರಾಯತೇ ಯತಃ ॥ ಸವಿತೃದ್ಯೋತನಾಚ್ಚೈವ ಸಾವಿತ್ರೀ ಪರಿಕೀರ್ತಿತಾ । ಜಗತಃ ಪ್ರಸವಿತ್ರೀ ವಾ ವಾಗ್ರೂಪತ್ವಾತ್ಸರಸ್ವತೀಃ ॥ ಎಂದು ಪ್ರಮಾಣಪದಕದಿಂದ ಪರಾನ್ನ ಸ್ವೀಕಾರಮಾಡಿದ ಪಾಪ, ಸಾಧಾರಣಪಾಪಗಳು, ಚಿಲ್ಲರೆಪಾಪಗಳು ಇವುಗಳಿಂದ ರಕ್ಷಣವಾಗುವ ಕಡೆಯಿಂದ ಗಾಯತ್ರೀ ಎಂತಲೂ, ಸವಿತೃನಾಮಕ ಶ್ರೀಲಕ್ಷ್ಮೀನಾರಾಯಣನ ತೋರಿಸುವ ದೆಸೆಯಿಂದ ಸಾವಿತ್ರೀ ಎಂತಲೂ, ಜಗತ್ತು ಸೃಷ್ಟಿಮಾಡುವುದರಿಂದಲೂ ವಾಕ್ಯರೂಪದಿಂದಲೂ ಸರಸ್ವತೀ ಎಂತಲೂ ಪರಮಾತ್ಮನಿಗೆ ಹೆಸರು.

ಪ್ರ) ಗಾಯತ್ರೀ, ಸಾವಿತ್ರೀ ಮತ್ತು ಸರಸ್ವತೀ ಎಂಬುವ ಶಬ್ದಗಳಿಗೆ ತತ್ತನ್ನಾಮಕ ಸ್ತ್ರೀದೇವತಾಗಳನ್ನು ಬಿಟ್ಟು ಅವರ ನಿಯಾಮಕ ಅಥವಾ

ತನ್ನಾಮಕ ಪರಮಾತ್ಮನೆಂತ ಹೇಳಲು ಕಾರಣವೇನು ? ಅವರು ಚತುರ್ಮುಖ ಬ್ರಹ್ಮದೇವರ ಪತ್ನಿಯರು ಅಲ್ಲವಾ ?

ಉ:- ಈ ಸ್ಥಳದಲ್ಲಿ ಆ ಶಬ್ದಗಳಿಗೆ ತತ್ತನ್ನಿಯಾಮಕ ಅಥವಾ ನಾಮಕ ಪರಮಾತ್ಮನೆಂತ ಅರ್ಥವೇ ಹೊರತು ಆ ದೇವತಾಗಳೆಂದು ಅರ್ಥವಲ್ಲ. ಮೋಕ್ಷಾದಿ ಪುರುಷಾರ್ಥಗಳನ್ನು ಕೊಡಲಿಕ್ಕೆ ಅವರಿಗೆ ಶಕ್ತಿ ಇಲ್ಲ. ಸಂಧ್ಯಾವಂದನೆ ಮಾಡಿದರೆ ಮೋಕ್ಷಾದಿ ಪುರುಷಾರ್ಥಗಳು ಪ್ರಾಪ್ತವಾಗುತ್ತವೆಯೆಂದು ಪ್ರಮಾಣವಿದೆ. ''ಗಾಯಂತಂ ತ್ರಾಯತೇ ಯಸ್ಮಾದ್ಗಾಯತ್ರೀತ್ಯುಚ್ಯತೇ ಬುಧೈಃ । ಎಂಬ ಮೇಲೆ ಕಂಡ ಪ್ರಮಾಣವಿದ್ದುದರಿಂದ ಗಾಯತ್ರೀ ಶಬ್ದವಾಚ್ಯನು ಪರಬ್ರಹ್ಮನೇ. ಮತ್ತು ''ಯದಧೀನಾಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ'' ಎಂಬುವ ನ್ಯಾಯದಿಂದಲೂ ಗಾಯತ್ರ್ಯಾದಿ ಶಬ್ದಗಳು ಪರಮಾತ್ಮದ್ಯೋತಕವೇ.

ಶ್ರೀಮದಾಚಾರ್ಯರು ಸಮನ್ವಯಾಧಿಕರಣ ಭಾಷ್ಯದಲ್ಲಿ ಗಾಯತ್ರೀ ಸಾವಿತ್ರೀ ಸರಸ್ವತೀ ಮೊದಲಾದ ಅನ್ಯತ್ರಪ್ರಸಿದ್ಧವುಳ್ಳ ಶಬ್ದಗಳಿಗೆ ಕೂಡಾ ಸ್ಪಷ್ಟವಾದ ಪ್ರಮಾಣಗಳನ್ನು ಉದಾಹರಿಸಿ ಪರಮಾತ್ಮನಲ್ಲೇ ಸಮನ್ವಯಮಾಡಿ ತೋರಿಸಿದ್ದಾರೆ. ದಯಮಾಡಿ ಆ ಪ್ರಮೇಯಗಳನ್ನು ಭಾಷ್ಯದಲ್ಲಿ ನೋಡುವುದು.

ಪ್ರ) ಪರಾಶರಸ್ಮೃತಿಗೆ ಕಲಿಯುಗದಲ್ಲಿ ಏನಾದರೂ ಪ್ರಮಾಣಾಧಿಕ್ಯವುಂಟೋ?

ಉ:- ಉಂಟು. '' ಕೃತೇತು ಮಾನವಾಧರ್ಮಾಃ ತ್ರೇತಾಯಾಂ ಗೌತಮಾಸ್ಮೃತಾಃ। ದ್ವಾಪರೇ ಶಂಖಲಿಖಿತಾಃ। ಕಲೌ ಪರಾಶರಸ್ಮೃತಾಃ॥'' ಎಂದು ಪ್ರಮಾಣವಿದೆ. ಕೃತಯುಗದಲ್ಲಿ ಮನುಸ್ಮೃತಿಗೆ ಪ್ರಮಾಣ್ಯಾಧಿಕ್ಯತೆ. ತ್ರೇತಾಯುಗದಲ್ಲಿ ಗೌತಮಸ್ಮೃತಿಗೆ; ದ್ವಾಪರಯುಗದಲ್ಲಿ ಶಂಖಸ್ಮೃತಿಗೆ ಮತ್ತು ಕಲಿಯುಗದಲ್ಲಿ ಪರಾಶರಸ್ಮೃತಿಗೆ ಪ್ರಮಾಣಾಧಿಕ್ಯವು ಎಂದು ವಾಕ್ಯವುಂಟು.

ಪ್ರ) ಸಂಧ್ಯಾವಂದನೆಯನ್ನು ಮಾಡಿದರೆ ಫಲ ಏನು?

ಉ: ''ಉದ್ಯಂತಮಸ್ತಂ ಯಂ ತ ಆದಿತ್ಯಮಭಿಧ್ಯಾಯನ್ಕುರ್ವನ್ಬ್ರಾಹ್ಮಣೋವಿದ್ವಾನ್ ಸಕಲಂ ಭದ್ರಮಶ್ನುತೇ'' ಎಂದು ತೈತ್ತರೀಯ ಬ್ರಾಹ್ಮಣದಲ್ಲಿ ಹೇಳುತ್ತದೆ.

ಉದಯವಾಗತಕ್ಕ ಅಸ್ತಮಾನವಾಗತಕ್ಕ ಸೂರ್ಯಾಂತರ್ಗತ ಸೂರ್ಯನಿಯಾಮಕ (ಮಧ್ವಾಂತರ್ಯಾಮಿನ್) ಪರಮಾತ್ಮನಧ್ಯಾನ ಮಾಡಿ ಜ್ಞಾನಿಯಾದವನು ಐಹಿಕಾಮುಷ್ಮಿಕಾದಿ ಸಕಲಸುಖಗಳನ್ನು ಹೊಂದುತ್ತಾನೆ ಎಂದು ಇದರ ಅರ್ಥ.

''ಸಂಧ್ಯಾಮುಪಾಸತೇ ಯೇತು ಸತತಂ ಶಂಶಿತವ್ರತಾಃ। ವಿಧೂತ ಪಾಪಾಸ್ತೇಯಾಂತಿ ಬ್ರಹ್ಮಲೋಕಂ ಸನಾತನಂ।'' ಎಂದು ಪ್ರಮಾಣವಿದ್ದ ಕಡೆಯಿಂದ ಶ್ರದ್ಧಾಭಕ್ತಿಯುಳ್ಳವರಾಗಿ ಸಂಧ್ಯಾವಂದನೆಯನ್ನು ಯಾರು ಉಕ್ತಕಾಲಗಳಲ್ಲಿ ನಿರಂತರ ಆಚರಿಸುತ್ತಾರೋ ಅವರುಗಳು ಪಾಪ ನಿರ್ಮುಕ್ತರಾಗಿ ಶಾಶ್ವತವಾದ ಬ್ರಹ್ಮಲೋಕವನ್ನು (ಅಂದರೆ ವೈಕುಂಠಲೋಕವನ್ನು) ಕುರಿತು ಪ್ರಯಾಣಮಾಡುತ್ತಾರೆ ಎಂದು ಅರ್ಥ.

ಪ್ರ) ಸಂಧ್ಯಾವಂದನೆ ಮಾಡಿದರೆ ಫಲ ಹೇಳಿದಿರಿ. ಸಂಧ್ಯಾವಂದನೆ ಆಚರಿಸದಿದ್ದರೆ ಅದರಿಂದೇನಾದರೂ (ಪಾಪ) ಅನರ್ಥಗಳು ಉಂಟೋ?

ಉ:- ಉಂಟು. ''ಯಸ್ಸಂಧ್ಯಾಂಕಾಲತಃ ಪ್ರಾಂತಾಮಾಲಸ್ಯಾದತಿವರ್ತತೇ। ಸೂರ್ಯಹತ್ಯಾಮವಾಪ್ನೋತಿ ಉಲೂಕತ್ವಮಿಯಾತ್ಸದಾ।'' ಎಂದು ಪ್ರಮಾಣವಿರುವುದರಿಂದ ಯಾವ ಪುರುಷನು ಸಂಧ್ಯಾಕಾಲ ಪ್ರಾಪ್ತವಾಗಿರಲು ಆಲಸ್ಯದಿಂದ ಅಥವಾ ಅಶ್ರದ್ಧದಿಂದ ಆ ಕಾಲದಲ್ಲಿ ಸಂಧ್ಯಾವಂದನೆ ಮಾಡದೇ ಆ ಕಾಲಾತಿಕ್ರಮಣವನ್ನು ಮಾಡುತ್ತಾನೋ ಆ ಪುರುಷನು ಸೂರ್ಯಹತ್ಯ ಮಾಡಿದ ಪಾಪವನ್ನು ಹೊಂದಿ ಸರ್ವಕಾಲದಲ್ಲಿಯೂ ಗೂಗೆಯಾಗಿ ಜನ್ಮಹೊಂದುತ್ತಾನೆ ಎಂದು ಅರ್ಥ. '' ಉಪತಿಷ್ಠಂತಿ ವೈ ಸಂಧ್ಯಾಂ ಏನ ಪೂರ್ವಾಂ ನ ಪಶ್ಚಿಮಾಂ। ದುರಾತ್ಮಾನಸ್ತಾಮಿಶ್ರಂ ನರಕಂ ನೃಪ ।'' ಎಂದು ವಿಷ್ಣುಪುರಾಣದಲ್ಲಿ ಉಕ್ತವಾಗಿದೆ. ಯಾರಿಂದ ಪ್ರಾತಸ್ಸಂಧ್ಯಾವಂದನಯಾಗಲೀ ತರುವಾಯದ ಸಂಧ್ಯಾವಂದನೆಗಳಾಗಲೀ ಮಾಡದೇ ಬಿಡುತ್ತದೋ, ಅಂಥಾ ದುರಾತ್ಮರು ತಾಮಿಶ್ರನರಕವನ್ನು ಕುರಿತು ಪ್ರಯಾಣಮಾಡುತ್ತಾರೆ ಎಂದರ್ಥ.

'' ಸಂಧ್ಯಾ ಏವ ನ ವಿಜ್ಞಾತಾ ಸಂಧ್ಯಾಏನಾನುಪಾಸಿತಾ । ಜೀವಮಾನೋ ಭವೇತ್ ಶೂದ್ರೋ ಶ್ವಾನೋಭಿಜಾಯತೇ'' ಎಂದು ಪ್ರಮಾಣವು ಗೋಭಿಲಸ್ಮೃತಿಯಲ್ಲಿ ಉಂಟು. ಸಂಧ್ಯಾವಂದನೆಯನ್ನು ಯಾರು ತಿಳಿಯರೋ ಯಾರು ಆಚರಣೆ ಮಾಡುವುದಿಲ್ಲವೋ ಆ ಪಾಪಿಗಳು ಬದುಕಿರಲಾಗಿ ಶೂದ್ರರೆಂದು ಎಣಿಸತಕ್ಕದ್ದು. ಮರಣಾನಂತರ (ಶ್ವಾನ) ನಾಯಿಗಳಾಗಿ ಹುಟ್ಟುತ್ತಾರೆ.

'ಅನಾರ್ತಶ್ಚೋತ್ಸೃಜೇದ್ಯಸ್ತು ಸ ವಿಪ್ರಶ್ಶೂದ್ರ ಸಮ್ಮಿತಃ। ಪ್ರಾಯಶ್ಚಿತ್ತೀ ಭವೇಚ್ಚೈವ ಲೋಕೇಭವತಿ ನಿಂದಿತಃ॥'' ಎಂದು ಯಾಜ್ಞವಲ್ಕ್ಯ

ಸ್ಮೃತಿಯಲ್ಲಿ ಪ್ರಮಾಣವಿದೆ. ರೋಗ ಮೊದಲಾದ ವ್ಯಾಧಿಯಿಲ್ಲದ ಕಾಲಕ್ಕೆ ಸಂಧ್ಯಾವಂದನವನ್ನು ಆಚರಣಮಾಡದೇ ಯಾರು ಬಿಡುತ್ತಾರೋ ಆ ಬ್ರಾಹ್ಮಣರು, ಶೂದ್ರಸಮಾನರು, ಪ್ರಾಯಶ್ಚಿತ್ತಾರ್ಹರಾದವರು ಆಗೋದಲ್ಲದೇ ಲೋಕದಲ್ಲಿ ನಿಂದಿತರಾಗುತ್ತಾರೆಂದು ಅರ್ಥ. '' ನೋಪತಿಷ್ಠಂತಿ ಯೇ ಸಂಧ್ಯಾಂಸ್ವಸ್ಥಾವಸ್ಥಾಸು ವೈ ದ್ವಿಜಃ। ಹಿಂಸಂತಿ ಹಿ ಸದಾ ತೇ ವೈ ಭಗವಂತಂ ದಿವಾಕರಂ।'' ಎಂದು ಅತ್ರಿ ಶ್ರುತಿಯಲ್ಲಿ ಪ್ರಮಾಣವಿರುವುದರಿಂದ ಸ್ವಸ್ಥಾವಸ್ಥದಲ್ಲಿರುವ ಕಾಲಕ್ಕೆ (ಹುಷಾರಾಗಿರುವ ವೇಳೆಯೂ) ಯಾರು ಸಕಾಲದಲ್ಲಿ ಸಂಧ್ಯಾವಂದನೆಯನ್ನು ಆಚರಣೆ ಮಾಡುವುದಿಲ್ಲವೋ ಅವರು ಸೂರ್ಯನ ಹಿಂಸಾ ಮಾಡಿದ ಫಲವನ್ನು ಹೊಂದುತ್ತಾರೆ ಎಂದು ಅರ್ಥ.

ಪ್ರ) ಇದರಿಂದ ರೋಗ ಇದ್ದಕಾಲಕ್ಕೆ ಸಂಧ್ಯಾವಂದನೆ ಮಾಡಲಿಕ್ಕೆ ಶಕ್ತಿಯಿಲ್ಲದೇ ಇದ್ದರೆ ಬಿಡಬಹುದಾ ?

ಉ:- ಆ ಕಾಲಕ್ಕೆ ಕೂಡಾ ಸಂಧ್ಯಾವಂದನೆಯನ್ನು ಪೂರ್ಣ ಬಿಡಕೂಡದು . ಆ ಪ್ರಕಾರ ಬಿಡುವುದಕ್ಕೆ ಪ್ರಮಾಣವಿಲ್ಲ. ಮಂತ್ರದಿಂದ ಸ್ನಾನಮಾಡಿ ಭಗವನ್ನಾಮೋಚ್ಚಾರಣೆಮಾಡಿ ಭಗವಂತನನ್ನು ಹೃದಯದಲ್ಲಿ ಸ್ಮರಿಸಿ ಮಾನಸಿಕಸಂಧ್ಯಾ ಮಾಡತಕ್ಕದ್ದು . ಅಥವಾ ಮತ್ತೊಬ್ಬರಿಂದ ತನಗಾಗಿ ಸಂಧ್ಯಾವಂದನೆ ಮಾಡಿಸಿ ಅದರ ಫಲವನ್ನು ತಾನು ಸ್ವೀಕಾರಮಾಡತಕ್ಕದ್ದು.

ಪ್ರ) ಸೂತಕಾದಿಗಳು (ಜಾತಾಶೌಚ ಮೃತಾಶೌಚಾದಿಗಳು) ಪ್ರಾಪ್ತವಾದರೆ ಆ ಕಾಲದಲ್ಲಿ ಹೇಗೆ ಮಾಡಬೇಕು?

ಉ:- ಸೂತಕಕಾಲದಲ್ಲಿ ಸಂಧ್ಯಾದಿ ನಿತ್ಯಕರ್ಮಗಳು ಮಾಡೋವಿಷಯಕ್ಕೂ ಬಿಡೋವಿಷಯಕ್ಕೂ ಧರ್ಮಶಾಸ್ತ್ರಕರ್ತೃಗಳ ಅಭಿಪ್ರಾಯ ಏಕೀಭೂತವಾಗಿದ್ದಂತೆ ಕಂಡುಬರುವುದಿಲ್ಲ '' ಸೂತಕೇ ಕರ್ಮಣಾಂ ತ್ಯಾಗಸ್ಸಂಧ್ಯಾದೀನಾಂ ವಿಧೀಯತೇ'' ಎಂದು ಪ್ರಮಾಣವಿರುವುದರಿಂದ ಸೂತಕ ಕಾಲದಲ್ಲಿ ಸಂಧ್ಯಾದಿ ಸತ್ಕರ್ಮಗಳು ಮಾಡಬಾರದೆಂದು ಕೆಲವು ಋಷಿಗಳ ಮತ. ಆ ಕಾಲದಲ್ಲಿಯೂ ಪ್ರಾಣಾಯಾಮ ಸಹಿತ ಅರ್ಘ್ಯಾಂತವಾಗಿ ಸಂಧ್ಯಾವಂದನೆ ಮಾಡುವ ಸಂಪ್ರದಾಯ ಕಂಡಿದೆ. ಮತ್ತು ಪ್ರಾಣಾಯಾಮ ಗಾಯತ್ರೀ ಜಪ ಬಿಟ್ಟು ಮಿಕ್ಕ ಮಂತ್ರಗಳನ್ನು ಉಚ್ಚರಿಸುವ ಸಂಪ್ರದಾಯವು ಕಂಡಿದೆ. ಆ ಕಾಲದಲ್ಲಿ ಆ ಪ್ರಕಾರ ಮಾಡುವುದು ಸಂಧ್ಯಾಸಮಾನವಾಗಿರು-ತ್ತದೆ. ಮತ್ತು ಕೆಲವರ ಅಭಿಪ್ರಾಯದಲ್ಲಿ ಸೂತಕಸ್ವಯಂ ಪ್ರಾಪ್ತವಾದದ್ದು, ಸೂತಕ ಜನರಸಂಗಡ ಅನಾಪತ್ತುಕಾಲದಲ್ಲಿ ಸಹವಾಸಮಾಡಿ ಸೂತಕಾನ್ನ ಭೋಜನಮಾಡುವ ಕಾರಣದಿಂದ ಅವರಸಮಾನ ಸೂತಕ ಪ್ರಾಪ್ತವಾದದ್ದು ಎಂದು ಎರಡು ವಿಧಭಾಗವನ್ನು ಮಾಡಿ ದ್ವಿತೀಯತರಗತಿ ಜನರು ಸಂಧ್ಯಾವಂದನೆ ಔಪಾಸನಾದಿಕಾರ್ಯಗಳು ಕೂಡ ಮಾಡತಕ್ಕದ್ದೆಂದು ಬರೆದಿದ್ದಾರೆ. '' ಆಶೌಚಂ ಯಸ್ಯ ಸಂಸರ್ಗಾದಾಪತ್ತೇದ್ಗೃಹಮೇಧಿನಃ। ಕ್ರಿಯಾಸ್ತಸ್ಯ ನ ಲುಪ್ಯಂತೇ ಗೃಹ್ಯಾಣಾಂ ಚ ನ ತದ್ಭವೇತ್।'' ಗೃಹ್ಯಾಣಾಂ ಎಂದರೆ ಔಪಾಸನಾದಿಗಳು ಎಂದು ಅರ್ಥ. ಛಂದೋಗಪರಿಶಿಷ್ಟದಲ್ಲಿ ಪಿತ್ರಾದಿಗಳ ಅಂತ್ಯಕರ್ಮಮಾಡುವ ಕಾಲದಲ್ಲಿಯೂ ಬ್ರಹ್ಮಚಾರಿಯಾದವನು ಸಂಧ್ಯಾವಂದನೆ ಅಗ್ನಿಕಾರ್ಯಗಳನ್ನು ಮಾಡಿತೀರಲೇ ಬೇಕು ಬಿಡಕೂಡದು ಎಂದು ಈ ಕೆಳಗೆ ಹೇಳುವ ಪ್ರಮಾಣವನ್ನು ಬರೆದಿದ್ದಾರೆ. ' ನ ತ್ಯಜೇತ್ಸೂತಕೇ ಕರ್ಮ ಬ್ರಹ್ಮಚಾರೀ ಸ್ವಕಂ ಕ್ವಚಿತ್ । '' ಎಂದು ಬರೆದಿದ್ದಾರೆ. ಸಂಪೂರ್ಣ ಬಿಟ್ಟರೆ ಬ್ರಾಹ್ಮಣ್ಯಸಿದ್ಧಿ ಆಗುವುದಿಲ್ಲವಾದ್ದರಿಂದ ಸ್ವಲ್ಪಭಾಗವಾದರೂ ಮಾಡಬೇಕು. ''ಸಂಧ್ಯಾಮಿಷ್ಟಿಂ ಚರುಂ ಹೋಮಂ ಯಾವಜ್ಜೀವಂ ಸಮಾಚರೇತ್ । ನ ತ್ಯಜೇತ್ಸೂತಕೇವಾಪಿ ತ್ಯಜನ್ಗಚ್ಛಂತ್ಯಧೋ ದ್ವಿಜಃ ॥ ಸೂತಕೇ ಮೃತಕೇಚ್ಚೈವ ಸಂಧ್ಯಕರ್ಮ ನ ಸಂತ್ಯಜೇತ್ । ಮನಸೋಚ್ಚಾರಯೇನ್ಮಂತ್ರಾನ್ ಪ್ರಾಣಾಯಾಮಮೃತೇ ದ್ವಿಜಃ॥'' ಎಂದು ಪರಾಶರಸ್ಮೃತಿಯಲ್ಲಿ ಹೇಳುತ್ತದೆ. ಈ ಕಾರಣಗಳದೆಶೆಯಿಂದ ಮತ್ತು 'ಯದ್ಯದಾಚರತಿ ಶ್ರೇಷ್ಠಃ ತತ್ತದೇವ ಇತರೋ ಜನಾ ಃ। ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥'' ಎಂಬುವ ಗೀತೋಕ್ತಿಯನ್ನು ಅನುಸರಿಸಿ ಹಿರಿಯರ ಸಂಪ್ರದಾಯಗಳನ್ನು ಅನುಸರಿಸಿ ಆಚರಣೆ ಮಾಡತಕ್ಕದ್ದು.

ಪ್ರ) ಸಂಧ್ಯಾವಂದನೆ ಮಾಡದಿದ್ದರೂ ಇತರ ಸತ್ಕರ್ಮಗಳು ಮಾಡಬಹುದಲ್ಲವಾ ?

ಉ:- ಆ ಪ್ರಕಾರ ಮಾಡಿದರೆ ಆ ಸತ್ಕರ್ಮಗಳ ಫಲಬರುವುದಿಲ್ಲ.

''ಸಂಧ್ಯಾಹೀನೋಽಶುಚಿರ್ನಿತ್ಯ ಮನರ್ಹಸ್ಸರ್ವಕರ್ಮಸು ।ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥'' ಎಂದು ದಕ್ಷಸ್ಮೃತಿಯಲ್ಲಿ ಹೇಳಿರುತ್ತದೆ. ಸಂಧ್ಯಾವಂದನೆಯನ್ನು ಮಾಡದವ ಸರ್ವದಾ ಅಶುಚಿಯಾಗಿ ಇರುತ್ತಾನೆ. ಯಾವ ಇತರಕರ್ಮಗಳನ್ನು ಮಾಡಿದಾಗ್ಯೂ ಅವುಗಳ ಫಲವನ್ನು ಹೊಂದುವುದಿಲ್ಲ ವೆಂದು ಅರ್ಥ. ''ಯೋಽನ್ಯತ್ರ ಕುರುತೇ ಯತ್ನಂ ಧರ್ಮಕಾರ್ಯೇ ದ್ವಿಜೋತ್ತಮಃ। ವಿಹಾಯ ಸಂಧ್ಯಾ ಪ್ರಣತಿಂ ಸ ಯಾತಿ ನರಕಾಯುತಂ'' ಎಂದು ಕೂರ್ಮಪುರಾಣದಲ್ಲಿ ಹೇಳಿದೆ. ಸಂಧ್ಯಾವಂದನೆಯನ್ನು ಬಿಟ್ಟು ಇತರ ಧರ್ಮಕಾರ್ಯಗಳಲ್ಲಿ ಪ್ರವರ್ತನೆ, ಪ್ರಯತ್ನ ಮಾಡುವವರು ಹತ್ತು ಸಹಸ್ರ ನರಕಗಳನ್ನು ಹೊಂದುತ್ತಾರೆಂದು ಅರ್ಥ.

ಪ್ರಯತ್ನಮಾತ್ರಕ್ಕೆ ಇಷ್ಟು ಅನರ್ಥ ಫಲವಿದ್ದರೆ ಪ್ರವರ್ತನದಿಂದ ಏನು ಹೇಳತಕ್ಕದ್ದು.

ಪ್ರ) ಶಾಸ್ತ್ರದಲ್ಲಿ ಸಂಧ್ಯಾವಂದನೆಯನ್ನು ಎಷ್ಟು ಭಾಗ ಮಾಡಿದ್ದಾರೆ?

ಉ:- ಸಂಧ್ಯಾವಂದನೆಯನ್ನು ಅರ್ಘ್ಯಪ್ರದಾನಾಂತ, ಜಪಾಂತ, ಉಪಸ್ಥಾನಾಂತ ಎಂದು ಮೂರುಭಾಗ ಮಾಡಲ್ಪಟ್ಟಿದೆ. ಕೆಲವರ ಅಭಿಪ್ರಾಯದಲ್ಲಿ ''ಅರ್ಘ್ಯಾಂತಾ ಉಪಸ್ಥಾನಾಂತಾ ಸಂಧ್ಯೇಯಂ ದ್ವಿವಿಧಾ ಮತಾ'' ಎಂದು ಎರಡು ಭಾಗವೇ ಮಾಡಿದ್ದಾರೆ. ಅವರು ಜಪವನ್ನು ಉಪಸ್ಥಾನದಲ್ಲಿ ಸೇರಿಸಿದ್ದಾರೆ.

ಪ್ರ) ಸಂಧ್ಯಾವಂದನ ದ್ವಿಜನ್ಮನು ಯಾವ ಕಾಲ ಮೊದಲು ಮಾಡಿಕೊಂಡು ಯಾವಕಾಲದವರೆಗೆ ಆಚರಣೆ ಮಾಡಬೇಕು ?

ಉ:- ಪ್ರತಿದ್ವಿಜನ್ಮನು ಮೌಂಜೀಬಂಧನ(ಉಪನಯನ) ಆರಂಭಮಾಡಿಕೊಂಡು ಆಮರಣಾಂತವಾಗಿ ಮಾಡತಕ್ಕದ್ದು. ''ಮೌಂಜೀಬಂಧನಮಾರಭ್ಯ ಪ್ರಾತಶ್ಚಕಾಲಯೋಃ। ಮಧ್ಯಾಹ್ನೇಪಿ ಚ ಕರ್ತವ್ಯಂ ಸಂಧ್ಯಾವಂದನಮಿಷ್ಟದಂ।'' ಎಂದು ಧರ್ಮಶಾಸ್ತ್ರದಲ್ಲಿ ಹೇಳಿರುವುದರಿಂದ, ಉಪನಯನ ಆದದ್ದು ಮೊದಲು ತಾನು ಜೀವಿತನಾಗಿರುವವರೆಗೆ ಮೂರುಕಾಲಗಳಲ್ಲಿಯೂ ಪ್ರತಿದಿನವೂ ಮೂರಾವರ್ತಿ ಸಂಧ್ಯಾವಂದನೆಯನ್ನು ಮಾಡತಕ್ಕದ್ದು. ಆ ಪ್ರಕಾರ ಮಾಡಿದರೆ ಇಷ್ಟಪ್ರಾಪ್ತಿ ಆಗುತ್ತದೆಂದು ಅಭಿಪ್ರಾಯ.

ಪ್ರ) ಸಂಧ್ಯಾವಂದನೆಯನ್ನು ಕ್ಷತ್ರಿಯರು, ವೈಶ್ಯರೂ ಕೂಡ ಮಾಡತಕ್ಕದ್ದೇನಾ?

ಉ:- ಅವಶ್ಯಮಾಡತಕ್ಕದ್ದು. ಅವರು ದ್ವಿಜರಲ್ಲಿ ಸೇರಿದವರು. ಅವರಿಗೆ ಕರ್ಮಾಧಿಕಾರವುಂಟು. ಉಪನಯನವಾದದ್ದು ಮೊದಲು ಬ್ರಾಹ್ಮಣರಂತೂ ಯಾವಜ್ಜೀವ ಸಂಧ್ಯಾವಂದನಾದಿಗಳು ಆಚರಣೆಮಾಡತಕ್ಕದ್ದೇ ಸರಿ . ಸರ್ವಥಾ ಬಿಡಕೂಡದು.

ಪ್ರ) ಸಂಧ್ಯಾಪ್ರಾರಂಭ ಮಾಡಿದ ಸ್ಥಳದಲ್ಲೇ ಸಮಾಪ್ತಿಮಾಡಬೇಕಾ? ಒಂದು ಸ್ಥಳದಲ್ಲಿ ಪ್ರಾರಂಭಿಸಿ ಮತ್ತೊಂದು ಸ್ಥಳದಲ್ಲಿ ಮುಗಿಸ-ಬಹುದಾ?

ಉ:- 'ಸಂಧ್ಯಾಪ್ರದೇಶೇ ಸಂಧ್ಯಾಯಾಂ। ಸಂಧ್ಯಾಂ ತತ್ರಸಮಾಪಯೇತ್ ॥ ಅನ್ಯತ್ರ ಚೇಜ್ಜಪಂಕುರ್ಯಾತ್ ಸಾ ಸಂಧ್ಯಾನಿಷ್ಫಲಾ-ಭವೇತ್।'' ಎಂದು ಪ್ರಮಾಣವಿರುವುದರಿಂದ ಸಂಧ್ಯಾಪ್ರಾರಂಭಮಾಡಿದ ಸ್ಥಳದಲ್ಲೇ ಸಂಪೂರ್ಣಮಾಡತಕ್ಕದ್ದು . ಹಾಗೆ ಅಲ್ಲದಲೆ ಜಪಾದಿಗಳು ಅನ್ಯತ್ರಮಾಡಿದರೆ ಫಲವಿಲ್ಲ.

ಪ್ರ) ಸಂಧ್ಯಾವಂದನೆ ಸರ್ವದಾ ಸ್ವಗೃಹದಲ್ಲೇ ಮಾಡಬೇಕಾ ? ಅನ್ಯತ್ರ ನದೀಸರೋವರ ಮೊದಲಾದ ಜಲಾಶಯಗಳಲ್ಲಿ ಮಾಡಬಹುದಾ? ಆ ಪ್ರಕಾರ ಮಾಡುವ ಪಕ್ಷದಲ್ಲಿ ಫಲತಾರತಮ್ಯಗಳು ಏನಾದರೂ ಉಂಟಾ ?

ಉ:- 'ಗೃಹೇತ್ವೇಕ ಗುಣಾಸಂಧ್ಯಾ ಗೋಷ್ಠೇದಶಗುಣಾಸ್ಮೃತಾ। ಶತಸಾಹಸ್ರಿಕಾನದ್ಯಾಮನಂತಾವಿಷ್ಣುಸನ್ನಿಧೌ ॥'' ಎಂದು ಪ್ರಮಾಣವಿ-ರುವುದರಿಂದ ಸ್ವಗೃಹದಲ್ಲಿ ಮಾಡಿದರೆ ಬರುವ ಫಲಕ್ಕಿಂತಲೂ ಗೋಷ್ಠದಲ್ಲಿ ಮಾಡಿದರೆ ದಶ(ಹತ್ತು) ಗುಣ ಹೆಚ್ಚಾಗಿ ಫಲಬರುತ್ತದೆ. ಪುಣ್ಯತೀರ್ಥಗಳಲ್ಲಿ ಮಾಡಿದರೆ ನೂರುಸಹಸ್ರ(ಲಕ್ಷ) ಗುಣ ಬರುತ್ತದೆ. ದೇವಾಲಯಾದಿ ದೇವತಾಸಮೀಪಮಾಡಿದರೆ ಅನಂತಫಲ ಬರುತ್ತದೆ ಎಂದು ಅರ್ಥವಾಗುತ್ತದೆ. ಇದಲ್ಲದೇ ' ಬಹಿಸ್ಸಂಧ್ಯಾದಶಗುಣಾಗರ್ತ ಪ್ರಸ್ರವಣೇಷುಚ । ಖ್ಯಾತಾತೀರ್ಥೇ ದಶಗುಣಾ ಸಾಹಸ್ರಾಜಾಹ್ನವೀಜಲೇ।' ಎಂತಲೂ ಪ್ರಮಾಣವಿರುವುದು. 'ಅನೃತಂಮದ್ಯಗಂಧಂ ಚ ದಿವಾಮೈಥುನಮೇವಚ। ಪುನಾತಿ ವೃಷಲಸ್ಯಾನ್ನಂ ಸಂಧ್ಯಾಬಹಿರುಪಾಸಿತಾ ॥' ಎಂದು ಪ್ರಮಾಣವಿರುವುದರಿಂದ ಸಂಧ್ಯಾ ಉಪಾಸನಾ ಹೊರಗಡೆ ಮಾಡಿದರೆ ಅಪದ್ಧಮಾತನಾಡಿದ, ಮದ್ಯಗಂಧದ, ದಿವಾಮೈಥುನದ, ವೃಷಲೀಸ್ತ್ರೀಕೈಯಿಂದ ಅನ್ನ ಭೋಜನಮಾಡಿದ ಪಾಪಗಳೆಲ್ಲವೂ ಪರಿಹಾರವಾಗುತ್ತವೆ. ಇದರಿಂದ ಪ್ರಾಯೇಣ ಅನುಕೂಲವಿದ್ದರೆ ಗೃಹಾತಿರಿಕ್ತಸ್ಥಳದಲ್ಲಿಯೇ ಸಂಧ್ಯಾವಂದನೆ ಮಾಡುವುದು ಉತ್ತಮಕಲ್ಪವೆಂದು ತೋರುತ್ತದೆ.

ಪ್ರ) ಮೇಲೆ ಹೇಳಿದ ಪ್ರಕಾರ ಪುಣ್ಯತೀರ್ಥಮೊದಲಾದ ಸ್ಥಳಗಳಿಗೆ ಸಮೀಪ ಎನಲಾಗಿ ಎಷ್ಟುದೂರವೆಂದು ಅಭಿಪ್ರಾಯ ? ಇದರ ವ್ಯಾಪ್ತಿಗೆ ಕ್ಲುಪ್ತವಿದೆಯೋ ಇಲ್ಲವೋ ?

ಉ: ಜಲಾಶಯಂ ಸಮಾರಭ್ಯ ಯಾವದ್ದಸ್ತಚತುಷ್ಟಯಂ। ತಾವಸ್ಥಾನಂ ನರಾಃ ಕ್ಷೇತ್ರಂ ಮಮಕ್ಷೇತ್ರಾಭ್ಯಧಿಕಂ ಭವೇತ್ ॥ ಎಂದು ಪ್ರಮಾಣವಿರುವುದರಿಂದ ಜಲಾಶಯಾದಿಗಳಿಗೆ ನಾಲ್ಕು ಮೊಳಗಳ ಒಳಗೆ ಇರುವ ಸ್ಥಳಮಾಹಾತ್ಮ್ಯ ವ್ಯಾಪ್ತಿ ಹೇಳಿದಂತಾಯಿತು. ॥

ಪ್ರ) ಮೇಲೆಕಂಡ ಪ್ರಕಾರ ಮೂರುದೇವತಾಕವಾದ ಸಂಧ್ಯಾವಂದನೆಗಳ ದೇವತಾ ನಾಮಗಳ ಹೆಸರು ಹೇಳಬೇಕು?

ಉ: ಆಗಲಿ ಗಾಯತ್ರೀನಾಮಕ ದೇವತಾಕವಾದದ್ದು ಪ್ರಾತಸ್ಸಂಧ್ಯಾ. ಸಾವಿತ್ರೀನಾಮಕವಾದದ್ದು ಮಧ್ಯಾಹ್ನಸಂಧ್ಯಾ. ಸರಸ್ವತೀನಾಮಕ

ದೇವತಾಕವಾದದ್ದು ಸಾಯಂಸಂಧ್ಯಾ. ಈ ಪ್ರಕಾರ ನಾಮಗಳು ಪ್ರತಿಪಾದ್ಯದೇವತಾಗಳೂ ಉಂಟು. ಹೀಗಿರಲಾಗಿ ಈ ನಾಮಗಳುಳ್ಳ ಪರಮಾತ್ಮನ ಪ್ರೀತ್ಯರ್ಥವಾಗಿ ಆಯಾ ಸಂಧ್ಯಾವಂದನಾದಿಗಳು ಮಾಡತಕ್ಕದ್ದು. ದೇವರನ್ನು ಬಿಟ್ಟು ಸಾಕ್ಷಾತ್ತಾಗಿ ಆ ದೇವತೆಗಳಿಗೆ ಪೂಜೆಯು ಕೂಡದು. 'ನಭಿನ್ನಾಂ ಪ್ರತಿಪದ್ಯೇತ ಗಾಯತ್ರೀಂ ಬ್ರಹ್ಮಣಾ ಸಹಾ'' ಎಂದು ಪ್ರಮಾಣವಿರುವ ದೆಸೆಯಿಂದ ಪೃಥಕ್ಕಾಗಿ ಗಾಯತ್ರ್ಯಾದಿಗಳಿಗೆ ಪೃಥಕ್ಕಾಗಿ ನಮನವು ಕೂಡದು.

ಪ್ರ) ಪ್ರಾಯೇಣ ಸಂಧ್ಯಾಕಾಲವಾವುದು. ?

ಉ:- 'ಮುಹೂರ್ತಮುದಗಾದರ್ವಾಗ್ ದ್ವಿಮುಹೂರ್ತಮತಃ ಪರಂ। ಸಂಧ್ಯಾಕಾಲಸ್ತು ವಿಜ್ಞೇಯೋ ವಿಪರೀತಸ್ತು ಪಶ್ಚಿಮಃ॥'' ಎಂದು ಪ್ರಮಾಣವಿರುವುದರಿಂದ ಸೂರ್ಯೋದಯಕ್ಕೆ ಮುಂಚಿತವಾಗಿ ಒಂದುಮುಹೂರ್ತಮೊದಲು ಸೂರ್ಯೋದಯಾನಂತರ ಎರಡು ಮುಹೂರ್ತದವರೆಗೂ ಪ್ರಾತಃ ಸಂಧ್ಯಾಕಾಲ . ಸೂರ್ಯಾಸ್ತಮಾನಕ್ಕೆ ಎರಡು ಮುಹೂರ್ತಮೊದಲು ಸೂರ್ಯಾಸ್ತಾನಂತರ ಒಂದು ಮುಹೂರ್ತದವರೆಗೂ ಸಾಯಂಸಂಧ್ಯಾಕಾಲ ವ್ಯಾಪ್ತವಾಗಿರುತ್ತದೆಯೆಂದು ಅಭಿಪ್ರಾಯ.

ಪ್ರ) ಮುಹೂರ್ತವೆಂದರೆ ಎಷ್ಟು ಪ್ರಮಾಣ ?

ಉ: ಎರಡು ಘಳಿಗೆ ಪ್ರಮಾಣಕ್ಕೆ ಒಂದು ಮುಹೂರ್ತವೆಂದು ಹೆಸರು.

ಪ್ರ) ಪ್ರಾತಃ ಸಂಧ್ಯಾವಂದನೆ ಯಾವಕಾಲದಲ್ಲಿ ಮಾಡತಕ್ಕದ್ದು ?

ಉ:- 'ಪೂರ್ವಾಂ ಸಂಧ್ಯಾಂ ಸ ನಕ್ಷತ್ರಾಂ '' ಎಂದು ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲಿ ಹೇಳಿದ್ದಾರೆ. ಪ್ರಾತಃ ಸಂಧ್ಯಾಂ ಸ ನಕ್ಷತ್ರಾಂ ಎಂದು ಶಂಖಸ್ಮೃತಿಯಲ್ಲಿ ಹೇಳಿರುವುದರಿಂದ ಪ್ರಾತಸ್ಸಂಧ್ಯಾವಂದನೆ ಸೂರ್ಯೋದಯಾತ್ಪೂರ್ವದಲ್ಲಿಯೇ ನಕ್ಷತ್ರಗಳು ಇರುವ ಕಾಲದಲ್ಲೇ ಮಾಡಬೇಕು ಎಂದು ಅಭಿಪ್ರಾಯ.

ಪ್ರ) ಮೇಲೆ ಹೇಳಿದ 'ಪೂರ್ವಾಂಸಂಧ್ಯಾಂ ಸ ನಕ್ಷತ್ರಾಂ' ಎಂಬುವ ಪ್ರಮಾಣದಿಂದ ಪ್ರಾತಸ್ಸಂಧ್ಯಾವಂದನೆ ನಕ್ಷತ್ರಸಹಿತವಾದ ಕಾಲದಲ್ಲೇ ಮಾಡಬೇಕೆಂದು ಹೇಳಿದಹಾಗೆ ಆಯಿತು. ನಕ್ಷತ್ರ ಸಹಿತವೆಂದರೆ ಪರಿಷ್ಕಾರವಾದ ಕಾಲಕ್ಲುಪ್ತಹೇಳಿದಾಂಗೆ ಆಗಲಿಲ್ಲ. ಆ ಕಾಲಕ್ಕೆ ವಿವರಣರೂಪವಾದ ಪ್ರಮಾಣಗಳು ಇಲ್ಲವಾ ?

ಉ:- ಉಂಟು. ದಕ್ಷಧರ್ಮಶಾಸ್ತ್ರದಲ್ಲಿ ''ರಾತ್ರ್ಯಂತಯಾಮೇನಾಂತ್ಯೌದ್ವೇ । ಸಂಧ್ಯಾಯಾಃ ಕಾಲ ಉಚ್ಯತೇ । ದರ್ಶನಾದ್ರವಿ-ರೇಖಾಯಾಸ್ತದಂತೋ ಮುನಿಭಿಸ್ಮೃತಃ।'' ಎಂದು ಪ್ರಮಾಣವಿದೆ. ರಾತ್ರಿಯಕಡೆ ಝಾಮಿನ ಕಡೇ ಎರಡು ಘಳಿಗೆಗಳು ಮೊದಲು ಮಾಡಿ ಸೂರ್ಯಕಿರಣಕಾಣಿಸೋವರೆಗೂ ಎಂದು ಅರ್ಥ. ಆ ಕಾಲದಲ್ಲಿ ಪ್ರಾತಸ್ಸಂಧ್ಯಾವಂದನೆಯನ್ನು ಮಾಡತಕ್ಕದ್ದು.

ಪ್ರ) ಸರ್ವರಿಗೂ ಆ ಪ್ರಕಾರ ಕ್ಲುಪ್ತವಾದ ಎರಡು ಘಳಿಗೆವಳಗೆ ಸಂಧ್ಯಾವಂದನೆ ಮಾಡಲಿಕ್ಕೆ ಅನುಕೂಲವಿಲ್ಲದಿದ್ದರೆ ಏನು ಗತಿ ? ಮಾರ್ಗಾಂತರ ಯಾವುದಾದರೂ ಉಂಟಾ ?

ಉ:- ಉಂಟು. 'ಉತ್ತಮಾತಾರಕೋಪೇತಾ । ಮಧ್ಯಮಾ ಲುಪ್ತತಾರಕಾ । ಅಧಮಾ ಸೂರ್ಯಸಹಿತಾ । ಪ್ರಾತಸ್ಸಂಧ್ಯಾ ತ್ರಿಧಾಮತಾ ॥' ಯೆಂದು ಪ್ರಮಾಣವಿದೆ. ಈ ಪ್ರಮಾಣದಿಂದ ಮೇಲೆಕಂಡ ಎರಡು ಘಳಿಗೆ ಕಾಲದ ವಳಗೆ ನಕ್ಷತ್ರಗಳು ಇದ್ದಕಾಲದಲ್ಲಿ ಸಂಧ್ಯಾವಂದನೆ ಮಾಡುವುದು ಉತ್ತಮಕಲ್ಪ , ನಕ್ಷತ್ರಗಳು ಕಾಣದೆ ಲುಪ್ತವಾದಕಾಲದಲ್ಲಿ ಸಂಧ್ಯಾವಂದನೆ ಮಾಡುವುದು ಮಧ್ಯಮಕಲ್ಪ ಮತ್ತು ಸೂರ್ಯೋದಯಾನಂತರ ಮಾಡುವುದು ಅಧಮಕಲ್ಪ ಎಂದು ತಿಳಿಯುತ್ತದೆ.

ಪ್ರ) ಪ್ರಾತಸ್ಸಂಧ್ಯಾವಂದನೆ ಸೂರ್ಯೋದಯಾನಂತರ ( ಅಧಮಕಲ್ಪದಲ್ಲಿ) ಮಾಡುವ ಪಕ್ಷಕ್ಕೆ ಅದಕ್ಕೆ ಅವಧಿಯಿಲ್ಲವಾ ? ಹಗಲು ಹತ್ತು ಹನ್ನೆರಡು ,ಎರಡು ನಾಲ್ಕು ಗಂಟೆಯವರೆಗೂ ಈಗ ಕೆಲವರು ಮಾಡುವಂತೆ ಮಾಡಬಹುದಾ ?

ಉ: ಹಾಗಲ್ಲ. ಅಧಮಪಕ್ಷದಲ್ಲಿ ಕೂಡಾ ಅವಧಿಹೇಳಿದೆ. ' ಆಸಂಗವಂ ಪ್ರಾತಸ್ಸಂಧ್ಯಾಯಾಃ ಗೌಣಕಾಲಃ ' ಎಂದು ವೃದ್ಧಮನುಧರ್ಮ ಶಾಸ್ತ್ರದಲ್ಲಿ ಹೇಳಿರುವಕಡೆಯಿಂದ ಸಂಗವಕಾಲದವರೆವಿಗೂ ಗೌಣಪಕ್ಷದಲ್ಲಿ ಪ್ರಾತಸ್ಸಂಧ್ಯಾವಂದನೆಯನ್ನು ಮಾಡಬಹುದು. ತರುವಾಯದಲ್ಲಿ ಮಾಡಿದ ಪಕ್ಷಕ್ಕೆ ಫಲ ಕಿಂಚಿತ್ತು ಬರುವುದಿಲ್ಲ.

ಪ್ರ) ಸಂಗವಕಾಲವೆಂದರೆ ಯಾವುದು ? ಎಷ್ಟು ಘಳಿಗೆವರೆಗೆ ಆ ಕಾಲ ವ್ಯಾಪ್ತವಾಗಿರುವುದು?

ಉ:- ಸೂರ್ಯೋದಯ ಮೊದಲು ಸೂರ್ಯಾಸ್ತಮಾನಪರ್ಯಂತ ಇರುವ ದಿನಮಾನಕಾಲವನ್ನು ಹದಿನೈದುಭಾಗಗಳಾಗಿ

ಮಾಡತಕ್ಕದ್ದು. ಪ್ರತಿಭಾಗಕ್ಕೂ ಒಂದು ಮುಹೂರ್ತವೆಂದು ಹೆಸರು. ಆ ಪ್ರಕಾರ ಭಾಗಮಾಡಿದರೆ ಸ್ವಲ್ಪ ಹೆಚ್ಚುಕಡಿಮೆಯಾಗಿ ಪ್ರತಿಭಾಗಕ್ಕೂ ಎರಡು ಘಳಿಗೆಗಳು ಬರುತ್ತವೆ. ಪ್ರಥಮ ಮೂರು ಮುಹೂರ್ತಗಳಿಗೆ ಪ್ರಾತಃ ಕಾಲವೆಂದು ಹೆಸರು. ದ್ವಿತೀಯ ಮೂರು ಮುಹೂರ್ತಗಳಿಗೆ ಸಂಗವಕಾಲವೆಂದು ಹೆಸರು. ತೃತೀಯ ಮೂರು ಮುಹೂರ್ತಗಳಿಗೆ ಮಧ್ಯಾಹ್ನ ಕಾಲವೆಂದು ಹೆಸರು. ಚತುರ್ಥ ಮೂರು ಮುಹೂರ್ತಗಳಿಗೆ ಅಪರಾಹ್ಣಕಾಲವೆಂದು ಹೆಸರು. ಪಂಚಮ (ಕಡೆಯ) ಮೂರು ಮುಹೂರ್ತಗಳಿಗೆ ಸಾಯಾಹ್ನವೆಂದು ಹೆಸರು. ಪ್ರಾತಃ ಕಾಲ ಸಮಾಪ್ತಿ ಆಗಿ ಸಂಗವಕಾಲ ಬರೋವರೆವಿಗೂ ಎಂದರೆ ಸರಾಸರಿ ಆರು ಘಳಿಗೆವಳಗೆ ಗೌಣಪಕ್ಷದಲ್ಲಿಯಾದರೂ ಪ್ರಾತಸ್ಸಂಧ್ಯಾವಂದನೆ ಮಾಡತಕ್ಕದ್ದು. ಇದರಿಂದ ಒಟ್ಟಿಗೆ ಉತ್ತಮ ಮಧ್ಯಮ ಗೌಣನಾಮಗಳಿಂದ ಪ್ರಾತಸ್ಸಂಧ್ಯಾಕಾಲ ಸೂರ್ಯೋದಯಕ್ಕೆ ಎರಡು ಘಳಿಗೆ ಮುಂಚಿಂದ ಮೊದಲುಮಾಡಿ ಸೂರ್ಯೋದಯಾನಂತರ ಆರುಘಳಿಗೆವರೆಗೆ ವ್ಯಾಪ್ತವಾಗಿ ಇರುತ್ತದೆಂದು ಕಾಣಬರುತ್ತದೆ.

ಪ್ರ) ಮಧ್ಯಾಹ್ನ ಸಂಧ್ಯಾವಂದನೆಗೆ ಕಾಲ ಶ್ರೀಮದಾಚಾರ್ಯರಿಂದ ''ಉತ್ತರಾಂ ಸದಿವಾಕರಾಂ ' ಎಂದು ಉಕ್ತವಾಗಿದೆಯೆಂದು ಹೇಳಿದಿರಿ. ಅದರಿಂದ ಮಧ್ಯಾಹ್ನ ಸಂಧ್ಯಾವಂದನೆ ಸೂರ್ಯ ಅಸ್ತಮಾನವಾಗುವವರೆಗೂ ಮಾಡಬಹುದಾ ? ಇಲ್ಲದೇ ಪ್ರಾತಸ್ಸಂಧ್ಯಾವಂದನೆಯಂತೆ ಕಲ್ಪತ್ರಯಕಾಲಗಳುಂಟೋ ?

ಉ:- ಅದಕ್ಕೂ ಕಲ್ಪತ್ರಯಗಳುಂಟು. ''ಸಂಧ್ಯೋತ್ತಮಾತೃತೀಯೇಂಶೇ ಪಂಚಧಾಂಶ ದಿನಸ್ಯತು। ಮಧ್ಯಮಾ ಸಾ ತದೂರ್ಧ್ವಂ ವಾ ಪೂರ್ವಂ ವಾ ಸ್ಯಾದ್ಧಿ ವೈವಹಿ।'' ಎಂದು ಧರ್ಮಪ್ರವೃತ್ತಿಯಲ್ಲಿ ಪ್ರಮಾಣ ಹೇಳಿರುತ್ತದೆ. ಮಾಧ್ಯಾನ್ಹಿಕ ಸಂಧ್ಯಾವಂದನೆ ದಿನ ತೃತೀಯ ಐದನೆಯ ಭಾಗದಲ್ಲಿ (3/5) ಮಾಡುವುದು ಉತ್ತಮಕಲ್ಪವೆಂದೂ, ಅದಕ್ಕೆ ಮುಂಚಿತವಾಗಿ ಆಗಲಿ ತರುವಾಯದಲ್ಲಾಗಲೀ ಸೂರ್ಯಾಸ್ತಮಯದ ಒಳಗೆ ಮಾಡುವುದು ಮಧ್ಯಮಕಲ್ಪವೆಂದೂ ಉಕ್ತವಾಗಿದೆ.

ಪ್ರ) ಇತರ ಸ್ಮೃತಿಗಳಲ್ಲಿ ಪ್ರಮಾಣಾಂತರಗಳು ಏನಾದರೂ ಉಕ್ತವಾಗಿದೆಯೇನು ?

ಉ:- ಉಕ್ತವಾಗಿದೆ. ಶಂಖಧರ್ಮಶಾಸ್ತ್ರದಲ್ಲಿ'' ಮಧ್ಯಮಾಂ ಸ್ನಾನಕರ್ಮಣಿ'' ಎಂದು ಪ್ರಯೋಗಮಾಡಿ, ಸ್ನಾನಕರ್ಮಣಿಯೆಂಬುವ ಶಬ್ದಕ್ಕೆ ಸ್ನಾನಕರ್ಮಣಿ=ಮಾಧ್ಯಾನ್ಹಿಕಸ್ನಾನಾನಂತರಮಿತ್ಯರ್ಥಃ॥ ಎಂದು ಹೇಳಿದೆ. ಇದರಿಂದ ಪ್ರಾತಸ್ನಾನಾನಂತರ ಮಾಡುವ ಮಧ್ಯಾನ್ಹ ಸ್ನಾನಮಾಡಿದ ತರುವಾಯ ಮಧ್ಯಾಹ್ನಸಂಧ್ಯಾವಂದನೆ ಮಾಡಬೇಕೆಂದು ತೋರುತ್ತದೆ. ದಕ್ಷಸ್ಮೃತಿಯಲ್ಲಿ''ಅಧ್ಯರ್ಧಯಾಮಾದಾಸಾಯಂ ಸಂಧ್ಯಾಮಾಧ್ಯಾಹ್ನಿಕೀಷ್ಯತೇ'' ಯೆಂದು ಉಕ್ತವಾಗಿದೆ ಎನಲಾಗಿ, ಉದಯವಾದ ಹದಿನೈದು ಝಾಮು ಮೊದಲು ದಿನಮಾನದ (4/5) ಭಾಗದವರೆಗಾಗಲೀ ಅಥವಾ ಸೂರ್ಯಾಸ್ತಮಾನ ಪರ್ಯಂತವಾಗಲೀ ಮಧ್ಯಾನ್ಹಸಂಧ್ಯಾಕಾಲ ವ್ಯಾಪ್ತವಾಗಿದೆಯೆಂದು ಅರ್ಥ।

ಈ ಪ್ರಮಾಣಗಳೆಲ್ಲ ನೋಡಲಾಗಿ ದಿನದ ತೃತೀಯ ಪಂಚಮಾಂಶಗಳಲ್ಲಿ ಮಧ್ಯಾನ್ಹ ಸಂಧ್ಯಾವಂದನೆ ಮಾಡಲಿಕ್ಕೆ ಉತ್ತಮ ಕಾಲವೆಂತಲೂ, ತತ್ಪೂರ್ವದಲ್ಲಿ ಆಗಲಿ ಅನಂತರದಲ್ಲಿ ಆಗಲಿ ಮಾಡುವುದು ಮಧ್ಯಮ ಕಲ್ಪವೆಂದು ತೋರುತ್ತದೆ.

ಪ್ರ) ಸಾಯಂ ಸಂಧ್ಯಾವಂದನೆಗೆ ಮೇಲೆ ಹೇಳಿದ ಪ್ರಕಾರ ಕಾಲಗಳು ಏನಾದರೂ ಉಕ್ತವಾಗಿದೆಯೋ ?

ಉ:- ಉಕ್ತವಾಗಿದೆ. ಶ್ರೀಮದಾಚಾರ್ಯರು 'ಉತ್ತರಾಂ ಸ ದಿವಾಕರಾಂ' ಯೆಂದು ಹೇಳಿದ್ದಾರೆ. ಸೂರ್ಯಾಸ್ತಮಾನವಾಗುವುದಕ್ಕಿಂತಲೂ ಮುಂಚಿತವಾಗಿಯೇ ಸಾಯಂಸಂಧ್ಯಾಮಾಡಬೇಕೆಂದು ಅರ್ಥ. ' ನಪ್ರಾತರ್ನಪ್ರದೋಷಶ್ಚ ಸಂಧ್ಯಾಕಾಲೋತಿಪದ್ಯತೇ' ಎಂದು ಪ್ರಮಾಣವಿದ್ದಕಡೆಯಿಂದ ಪ್ರಾತಸ್ಸಂಧ್ಯಾವಂದನೆ ಪ್ರಾತಃಕಾಲಕ್ಕೂ ಸಾಯಂಸಂಧ್ಯಾವಂದನೆ ಪ್ರದೋಷಕಾಲಕ್ಕೂ ಮೀರದಂತೆ ಆಚರಣೆ ಮಾಡತಕ್ಕದ್ದು. ಮತ್ತು ವ್ಯಾಸಸ್ಮೃತಿಯಲ್ಲಿ ''ಉತ್ತಮಾಸೂರ್ಯಸಹಿತಾ । ಮಧ್ಯಮಾಸ್ತಮಿತೇರವೌ । ಅಧಮಾತಾರಕೋಪೇತಾ । ಸಾಯಂಸಂಧ್ಯಾ ತ್ರಿಧಾ ಮತಾ॥'' ಎಂದು ಪ್ರಮಾಣಾಂತರವೂ ಉಂಟು. ಸೂರ್ಯಾಸ್ತಮಾನವಾಗುವದಕ್ಕಿಂತಮುಂಚೆ ಮಾಡುವುದು ಉತ್ತಮಕಲ್ಪವೆಂದೂ, ಅಸ್ತಮಾನವಾದನಂತರ ಮಾಡುವುದು ಮಧ್ಯಮಕಲ್ಪವೆಂತಲೂ, ನಕ್ಷತ್ರಗಳು ಸಹಿತವಾದ ಕಾಲದಲ್ಲಿ ಮಾಡುವುದು ಅಧಮ ಕಲ್ಪವೆಂದೂ ತಿಳಿಯುವುದು.

ಪ್ರ) ಅಧಮಕಲ್ಪದಲ್ಲಿ ನಕ್ಷತ್ರಗಳ ಸಹಿತವೆಂದರೆ ರಾತ್ರಿ ಎಷ್ಟುಕಾಲದವರೆಗೂ ಅವಧಿಯೆಂದು ಅರ್ಥ ? ನಿಶೀಥ ಎಂದರೆ ಅರ್ಧರಾತ್ರಿ ಯವರೆಗೂ ಮಾಡಬಹುದಾ ?

ಉ:- ಅಧಮಕಲ್ಪಕ್ಕೆ ಕೂಡಾ ಕಾಲಕ್ಲುಪ್ತ ಉಂಟು. 'ಆಪ್ರದೋಷಾವಸಾನಂ ಚ ಸಾಯಂ ಸಂಧ್ಯಾಯಾಃ ಗೌಣಕಾಲಃ' ಎಂದು ವೃದ್ಧಮನು

ಸ್ಮೃತಿಯಿದೆ. ಅಧಮಕಲ್ಪದಲ್ಲಿ ಸಾಯಂಸಂಧ್ಯಾವಂದನೆಯನ್ನು ಪ್ರದೋಷದ ಒಳಗೆ ಮಾಡುವುದೆಂದರ್ಥ . ಪ್ರದೋಷಯೆಂಬುವ ಕಾಲ ಸೂರ್ಯಾಸ್ತಮಾನದ ನಂತರ ಮೂರುಮುಕ್ಕಾಲು (3-3/4) ಘಳಿಗೆ ಪರ್ಯಂತವಿರುವುದು. ''ಪ್ರ'' ಪ್ರಕೃಷ್ಟವಾಗಿ ಎಂದರೆ ದಟ್ಟವಾಗಿ 'ದೋಷ' ಕತ್ತಲು ವ್ಯಾಪ್ತವಾಗುವಕಾಲಕ್ಕೆ ಪ್ರದೋಷವೆಂದು ವ್ಯಾಖ್ಯಾನ ಮಾಡಿದ್ದಾರೆ. ಅಂದರೆ ಕತ್ತಲುವ್ಯಾಪಿಸುವ ಕಾಲವೆಂದು ಅರ್ಥ. ''ಪ್ರದೋಷೋ ರಜನೀಮುಖಃ'' ಎಂದು ಅಮರಕೋಶಪ್ರಮಾಣವುಂಟು. ಶಂಖಸ್ಮೃತಿವಳಗೆ ''ಸಾದಿತ್ಯಾಂ ಪಶ್ಚಿಮಾಂ ಸಂಧ್ಯಾಮು-ಪಾಸೀತ ಯಥಾ ವಿಧಿ'' -ಸೂರ್ಯಸಹಿತವಾಗಿ ಸಾಯಂ ಸಂಧ್ಯಾವಂದನವು ಶಾಸ್ತ್ರಪ್ರಕಾರವಾಗಿ ಮಾಡತಕ್ಕದ್ದು ಎಂದರ್ಥ. ಈ ಸ್ಮೃತಿಗಳ ಪ್ರಕಾರ ಸಾಯಂಸಂಧ್ಯಾವಂದನೆ ಸೂರ್ಯಾಸ್ತಮಾನ ಆಗುವುದಕ್ಕಿಂತಲೂ ಮುಂಚಿತವಾಗಿಯೇ ಮಾಡುವುದು ಉತ್ತಮ. ಸೂರ್ಯಾಸ್ತ-ಮಯವಾದನಂತರ ಮಾಡುವುದು ಮಧ್ಯಮ, ನಂತರ ಪ್ರದೋಷಕಾಲದ ಒಳಗೆ ಮಾಡುವುದು ಅಧಮ ಎಂದು ಪರಿಷ್ಕಾರವಾಗಿ ಅರ್ಥವಾಗುತ್ತಾದ್ದರಿಂದ ದೇಹಧರ್ಮಗಳಿಗೆ ಅವಿರೋಧವಾಗಿ ಅನುಕೂಲಾನುಸಾರ ಪ್ರದೋಷಕಾಲಮೀರದಂತೆ ಮಾಡತಕ್ಕದ್ದು. ( ಟಿ. ಯದ್ಯಪಿ ಪ್ರಯತ್ನಪೂರ್ವಕವಾಗಿ ಸಕಾಲದಲ್ಲಿಯೇ ಮಾಡುವುದು )

ಪ್ರ) ಪ್ರಾತಸ್ಸಂಧ್ಯಾವಂದನೆ ಪ್ರಥಮತಃ ಪ್ರಾರಂಭಮಾಡಿ ಕಡೆಯವರೆವಿಗೂ ಬರೆದು ಅದರ ಅರ್ಥವನ್ನೂ ವಿವರವಾಗಿ ಬರೆಯುವುದು ?

ಉ: ಅದೇ ಪ್ರಕಾರ ಆಗಲಿ.

ಪ್ರ) ಸಂಧ್ಯಾವಂದನೆಗೆ ಅರ್ಥ ತಿಳಿದುಕೊಂಡು ಮಾಡೋಣ ಅವಶ್ಯವೇನು ? ಆ ಪ್ರಕಾರ ತಿಳಿದುಕೊಂಡು ಮಾಡಿದರೆ ಪ್ರಯೋಜನವೇನು ?

ಉ:- ಸ್ವಾಭಿಪ್ರಾಯಕೃತಂ ಕರ್ಮ ಯತ್ಕಿಂಚಿತ್ ಜ್ಞಾನವರ್ಜಿತಂ। ಕ್ರೀಡಾಕರ್ಷೇವ ಬಾಲಾನಾಂ ತತ್ಸರ್ವಂ ನಿಷ್ಪ್ರಯೋಜನಂ॥'' ಎಂದು ಆಂಗೀರಸ ಸ್ಮೃತಿಯಲ್ಲಿ ಪ್ರಮಾಣವಿರುವುದರಿಂದ ಸಂಧ್ಯಾವಂದನೆ ಅರ್ಥ ತಿಳಿದುಕೊಂಡೇ ಮಾಡಬೇಕು. ಅರ್ಥತಿಳಿಯದೇ ಮಾಡಿದರೆ ಹುಡುಗರ ಆಟದಂತೆ ವ್ಯರ್ಥವಾಗುತ್ತದೆ. ಪ್ರಯೋಜನವಿಲ್ಲ.

ಶ್ರೀಗುರುಭ್ಯೋನಮಃ॥ ಹರಿಃ ಓಂ॥

ಪ್ರ) ಸಂಧ್ಯಾವಂದನೆಯನ್ನು ಪ್ರಾರಂಭಮಾಡಲಿಕ್ಕೆ ಮುಂಚಿತವಾಗಿ ಗುರುಗಳಿಗೆ ನಮಸ್ಕಾರವನ್ನು ಯಾಕೆ ಮಾಡಬೇಕು ?

ಉ:- ಸಂಧ್ಯಾವಂದನೆಯೆಂಬುವುದು ಮೇಲೆ ಹೇಳಿದಂತೆ ವೇದಗರ್ಭಿತವಾದ ಗಾಯತ್ರೀನಾಮಕ ಗುಣಪೂರ್ಣಪರಮಾತ್ಮನ ಪೂಜಾ. ಈ ಗಾಯತ್ರೀಯನ್ನು ಮೌಂಜೀಬಂಧನ(ಮುಂಜಿಯಾದಾಗ) ಕಾಲದಲ್ಲಿ ನೀನು ಗುರುಮುಖದಿಂದಲೇ ಉಪದೇಶಹೊಂದತಕ್ಕದ್ದು ಹೊರತು ಸ್ವಯಂ ಉಪದೇಶರಹಿತನಾಗಿ ಉಚ್ಚಾರಣೆ ಮಾಡತಕ್ಕದ್ದಲ್ಲ. ನಿನಗೆ ಈ ಗಾಯತ್ರಿಯನ್ನು ಯಾರು ಪ್ರಥಮತಃ ಉಪದೇಶ ಮಾಡಿದ್ದಾರೋ ಅವರೇ ನಿನ್ನ ಗುರುಗಳು. ಅವರಿಗೆ ಭಕ್ತಿಪೂರ್ವಕ ನಮನಾದಿಗಳು ಮಾಡಿ ಸಂಧ್ಯಾವಂದನೆಯನ್ನು ಪ್ರಾರಂಭಮಾಡ-ತಕ್ಕದ್ದು. ''ಶ್ವೇತಾಂಬರಧರಾಗೌರಾಃ ಗುರವಃ ಪುಸ್ತಕಾನ್ವಿತಾಃ । ವ್ಯಾಖ್ಯಾನಮುದ್ರಯಾಯುಕ್ತಾಃ ಧ್ಯಾಯಂತೋ ವೈ ನಿಜಂ ಹರಿಂ । ಧ್ಯಾತವ್ಯಾಃ ಪೂಜನಾದೌ ಚ ತಧ್ಯಾನಾತ್ ಜ್ಞಾನವಾನ್ ಭವೇತ್।'' ಎಂದು ಪ್ರಮಾಣವಿರುವುದರಿಂದ ಪ್ರಥಮದಲ್ಲಿ ಗುರುನಮಸ್ಕಾರ ಮಾಡತಕ್ಕದ್ದು.

ಪ್ರ) ಗಾಯತ್ರೀ ಎಂಬುದು ಯಾವುದು ವಿವರವಾಗಿ ತಿಳಿಸಿರಿ ?

ಉ:- ''ತತ್ಸವಿತುರ್ವರೇಣ್ಯಂ। ಭರ್ಗೋದೇವಸ್ಯ ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್ ।'' ಎಂಬುವುದೇ ಗಾಯತ್ರಿ. ಇದರ ವಿಷಯದಲ್ಲಿ ಮುಂದೆ ವಿಶೇಷಾಕಾರವಾಗಿ ಹೇಳಲ್ಪಡುವುದು.

ಪ್ರ) ಈ ಗಾಯತ್ರಿಗೆ ಅರ್ಥವೇನು ?

ಉ:- ಇನ್ನು ಮುಂದೆ ಸಂಧ್ಯಾವಂದನೆಯಲ್ಲಿ ವಿವರವಾಗಿ ಅರ್ಥ ಬರೆಯೋಣವಾಗುತ್ತದೆ. ಮತ್ತು ಜಪಾವಸರದಲ್ಲಿ ಬರೆಯೋಣವಾದೀತು.

ಪ್ರ) ಮೊದಲು ಹರಿಃ॥ ಓಂ॥ ಎಂದು ಯಾಕೆ ಹೇಳಬೇಕು ?

ಉ:- ''ಆದೌ ಭಗವತಾಪ್ರೋಕ್ತಾ ಹರಿರೋಮಿತಿಯತ್ನತಃ। ಆದಿತಸ್ಸರ್ವಕಾರ್ಯಾಣಾಂ ಪ್ರಯುಜ್ಯೇತೇಥ ತಾವುಭೌ। ಹರಿರೋಮಿತಿ

ನಿರ್ದಿಶ್ಯ ಯತ್ಕರ್ಮಕ್ರಿಯತೇ ಬುಧೈಃ । ಅಧೀಯತೇವಾದೇವರ್ಷೇತದ್ಧಿರ್ವೀರ್ಯೋತ್ತರಂ ಭವೇತ್ । ತಸ್ಮಾತ್ತುಪ್ರಾಥರುತ್ಥಾಯ ಪ್ರಾಙ್ಮುಖೋ ನಿಯತಶ್ಶುಚಿಃ। ಹರಿರ್ಹರಿರ್ಹರಿರಿತಿ ವ್ಯಾಹರೇದ್ದೋಷಶಾಂತಯೇ। ಸ್ನಾನಾದಿಷು ಚ ಕಾರ್ಯೇಷು ಕ್ಷುತಪ್ರಸ್ಖಲನಾದಿಷು। ಹರಿರಿತ್ಯುಚ್ಚರೇದುಚ್ಚೈರ್ಹರತ್ಯಸ್ಯಾಶುಭಂ ಹರಿಃ । '' ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳುತ್ತದೆ. ಆದ್ದರಿಂದ ಯಾವ ಸತ್ಕರ್ಮ ಮಾಡಿದರೂ ಕರ್ಮಸಾಫಲ್ಯಾರ್ಥವಾಗಿಯೂ ದೋಷಪರಿಹಾರಾರ್ಥವಾಗಿಯೂ ಮೊದಲು ಗುಣಪೂರ್ಣನಾದ ಪರಮಾತ್ಮನ ಧ್ಯಾನ ಮಾಡತಕ್ಕದ್ದು.

ಪ್ರ) ಹರಿಃ ಓಂ ಎಂದರೆ ಅರ್ಥವೇನು ?

ಉ:- ಹರಿಃ ಓಂ ಎಂದರೆ ಹರಿಃ=ಪಾಪನಾಶಕನಾದ ಪರಮಾತ್ಮನು ; ಓಂ=ಗುಣಪೂರ್ಣನು ಎಂದರ್ಥ. ಈ ವಾಕ್ಯ ಗಾಯತ್ರೀ ಅರ್ಥವನ್ನು ಸಂಕೋಚವಾಗಿಯೂ ಸಂಪೂರ್ಣವಾಗಿಯೂ ಹೇಳುತ್ತದೆ. ಓಂ ಶಬ್ದದಿಂದಲೇ ಗಾಯತ್ರಿ ಸಾಕ್ಷಾತ್ತಾಗಿ ಉತ್ಪನ್ನವಾಗುತ್ತದೆ. ಈ ಓಂ ಶಬ್ದ ಎಂಬುವುದು ಪ್ರಣವ ಮಂತ್ರ. ಇದು ಪರಮಾತ್ಮನು ಗುಣಪೂರ್ಣನೆಂದು ಹೇಳುವ ಸಮಸ್ತವೇದಗಳಿಗೂ ಆದಿಭೂತವಾದದ್ದು. ಈ ಶಬ್ದದಿಂದ ಸಮಸ್ತವೇದಾರ್ಥಗಳು ಜ್ಞಾತವಾಗುತ್ತವೆ. ವೇದಗಳಿಗೆ ಸಾರಾಂಶಭೂತವಾದದ್ದು. ಓಂ ಶಬ್ದಕ್ಕೆ ವ್ಯಾಖ್ಯಾನರೂಪವಾದದ್ದು ವ್ಯಾಹೃತಿಗಳು. ಆ ವ್ಯಾಹೃತಿಗಳಿಗೆ ವ್ಯಾಖ್ಯಾನರೂಪವಾದದ್ದು ಗಾಯತ್ರೀ, ಗಾಯತ್ರಿಗೆ ವ್ಯಾಖ್ಯಾನರೂಪವಾದದ್ದು ಪುರುಷಸೂಕ್ತ ; ಈ ಪುರುಷಸೂಕ್ತಕ್ಕೆ ವ್ಯಾಖ್ಯಾನರೂಪವಾದದ್ದು ಸಮಸ್ತವೇದಗಳು; ಅದಕ್ಕೆ ಗಾಯತ್ರಿಗೆ ವೇದಮಾತಾ ಎಂದು ಹೆಸರು. (ವಿ.ಸೂ. ಈ ವಿಷಯವನ್ನು ಜಗನ್ನಾಥದಾಸರಾಯರು ಒಂದು ಪದ್ಯದಲ್ಲಿ ಹೇಳಿದ್ದಾರೆ. ಅದನ್ನು ಈ ಪುಸ್ತಕದ ಕೊನೆಯಲ್ಲಿ ಬರೆಯಲಾಗುತ್ತೆ. )

ಪ್ರ) ಓಂ ಕಾರದಲ್ಲಿ ಏನೇನುವರ್ಣಗಳು ಮಿಳಿತವಾಗಿ ಇವೆ ?

ಉ:- ಅಕಾರ, ಉಕಾರ,ಮಕಾರ,ನಾದ, ಬಿಂದು, ಘೋಷ, ಶಾಂತ, ಅತಿಶಾಂತಗಳೆಂಬ ಎಂಟು ವರ್ಣಗಳು ಮಿಳಿತವಾಗಿವೆ. ಅದರಲ್ಲೇ ಅಕಾರಾದಿ ಪಂಚಾಶದ್ವರ್ಣಗಳು ಕೂಡಾ ಮಿಳಿತವಾಗಿವೆ. ಅದರ ವಿವರಗಳು ತಂತ್ರಸಾರಸಂಗ್ರಹದ ಆದಿಭಾಗದಲ್ಲಿ ಶ್ರೀಮದಾಚಾರ್ಯ ರಿಂದ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಆ ಭಾಗವನ್ನು ನೋಡಬೇಕು. ಇದಕ್ಕೆ ಪ್ರಣವ ಎಂದು ಹೆಸರು.

ಪ್ರ) ಓಂ ಶಬ್ದ ಗುಣಪೂರ್ಣನಾದ ಪರಮಾತ್ಮನೆಂದು ಹೇಳುವುದಕ್ಕೆ ವಿಶೇಷಪ್ರಮಾಣಗಳು ಉಂಟೋ ಏನು ?

ಉ:- ಅನೇಕ ಸ್ಥಳಗಳಲ್ಲಿ ಪ್ರಮಾಣಗಳುಂಟು. ''ಓಂ ಇತ್ಯೇದಕ್ಷರಮಿದಂ ಸರ್ವಂ। ತಸ್ಯೋಪವ್ಯಾಖ್ಯಾನಂ ಭೂತಂ ಭವದ್ಭವಿಷ್ಯದಿತಿ॥ ಸರ್ವಮೋಂಕಾರ ಏವಯಚ್ಚಾನ್ಯ ತ್ರಿಕಾಲಾತೀತಂ ತದಪ್ಯೋಂಕಾರ ಏವ। ಸರ್ವಂ ಹ್ಯೇತದ್ಬ್ರಹ್ಮಾ। ಅಯಮಾತ್ಮಾ ಬ್ರಹ್ಮಂ।''

ಕಾಠಕ ಉಪನಿಷತ್ತಿನಲ್ಲಿ'' ಸರ್ವೇವೇದಾಯತ್ಪದಮಾಮನಂತಿ। ತಪಾಂಸಿ ಸರ್ವಾಣಿ ಚ ಯದ್ವದಂತಿ। ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ। ತತ್ತೇಪದಂಸಂಗ್ರಹೇಣ ಬ್ರವೀಮಿ। ''ಓಂ'' ಇತ್ಯೇತತ್॥ ಎಂದು. ಇತರ ಶ್ರುತಿಗಳಲ್ಲಿಯೂ ಅನೇಕಸ್ಥಳಗಳಲ್ಲಿ ಪ್ರಮಾಣ-ಗಳುಂಟು. ಏತದ್ವೈಸತ್ಯಕಾಮಪರಂ ಚಾಪರಂ ಚ ಬ್ರಹ್ಮಯದೋಂಕಾರಃ। ಸರ್ವಸ್ಯ ಪ್ರಣವೋಹ್ಯಾದಿರ್ಮಧ್ಯಮಂತಸ್ತಥೈವ ಚ। ಪ್ರಣವಂ ಹೀಶ್ವರಂ ವಿಂದ್ಯಾತ್ಸರ್ವಸ್ಯ ಹೃದಯೇಸ್ಥಿತಂ । ಅಮಾತ್ರೋನಂ ತಮಾತ್ರಶ್ಚದ್ವೈತಸ್ಯೋಪಶ್ಮಮಶ್ಶಿವಃ । ಓಂಕಾರೋ ವಿದಿತೋ ಏವ ಸಮುನಿರ್ನೇತರೋಜನಾಃ॥'' ಇಂಥಾ ಪ್ರಮಾಣಗಳು ಅನೇಕವುಂಟು.

ಪ್ರ) ಓಂ ಶಬ್ದಕ್ಕೆ ಅಥವಾ ಪ್ರಣವಶಬ್ದಕ್ಕೆ ಏನು ಆಧಿಕ್ಯತೆ ?

ಉ:- ಓಂ ಶಬ್ದ ಸೃಷ್ಟಿಕಾಲದಲ್ಲಿ ಪರಮಾತ್ಮನಿಂದ ಮೊದಲು ಸೃಷ್ಟಿಮಾಡಲ್ಪಟ್ಟಿದ್ದು ಎಂದು ಬಹುಪ್ರಮಾಣಗಳುಂಟು. ಅದು ಪರಮಾತ್ಮ ವಾಚಕವಾದದ್ದು.

''ಓಮಿತ್ಯೇಕಾಕ್ಷರಂ ಬ್ರಹ್ಮ'' ''ಗಿರಮಸ್ಮ್ಯೆಕಮಕ್ಷರಂ'' 'ಪ್ರಣವಸ್ಸರ್ವವೇದೇಷು' 'ಪ್ರಣವಾದ್ಯಾಸ್ಥಿತಾವೇದಾಃ' 'ಪ್ರಣವೇಪರ್ಯವಸ್ಥಿತಾಃ' ವಾಙ್ಮಯಂ ಪ್ರಣವಸ್ಸರ್ವಂ ತಸ್ಮಾತ್ಪ್ರಣವಮಭ್ಯಸೇತ್' 'ಸಿಸೃಕ್ಷೋಃ ಪರಮಾದ್ವಿಷ್ಣೋ ಪ್ರಥಮಂ ದ್ವೌ ವಿನಿಸೃತೌ' 'ಓಂಕಾರಶ್ಚಾಥಶಬ್ದಶ್ಚ ತಸ್ಮಾತ್ಪ್ರಾಥಮಿಕಾ ಸ್ಮೃತಃ' 'ಅಹಮೇಕೋಽಖಿಳಗುಣವಾಚಕಃ ಪ್ರಣವೋ ಮಮ'' ಎಂದು ತಂತ್ರಸಾರದಲ್ಲಿ ಇದೆ. ಇದೇ ಅಭಿಪ್ರಾಯವೇ ಅನೇಕಸ್ಥಳಗಳಲ್ಲಿ ಉಂಟು. ಇದು ಗಾಯತ್ರಿಗೆ ಮಾತೃಸ್ಥಾನವಾದದ್ದು.

ಪ್ರ) ಪ್ರಣವಮುದ್ರೆ ಎಂದರೆ ಏನುಅರ್ಥ?

ಉ:- 'ಪಂಚಾಂಗುಲಿಭಿರ್ನಾಸಾಗ್ರಪೀಡನಂ ಪ್ರಣವಾಭಿಧಾ । ಮುದ್ರೇಯಂ ಸರ್ವಪಾಪಘ್ನಿ ವಾನಪ್ರಸ್ಥಗೃಹಸ್ಥಯೋಃ । ಓಂ ಕಾರ

ಮುದ್ರಯಾ ಯತಿಬ್ರಹ್ಮಚಾರಿಭ್ಯಾಂ ತತ್ಕಾರ್ಯಂ। ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಹೇಳಿದೆ.

ಹೀಗೆ ಸಂಧ್ಯೋಪಾಸನೆಗೆ ಉಪೋದ್ಘಾತವು ಮುಗಿದುದು.

ಅಥ ಶ್ರೀಋಗ್ಯಜುಃ ಸಂಧ್ಯಾಭಾಷ್ಯ (ಶ್ರೀತಿಮ್ಮಣ್ಣಾಖ್ಯ ನಿರ್ಮಿತ)

ಶ್ರೀವೇದವ್ಯಾಸಾಯನಮಃ॥ ಶ್ರೀಗುರುಭ್ಯೋನಮಃ॥ ಶ್ರೀಮದ್ಧ್ವಾಂತರ್ಯಾಮಿನ್ ಹರಿಃ ಓಂ॥

ಶ್ರೀಮತ್ಸತ್ಯಾಧಿರಾಜಂ ಸುಖಮುಖಸುಗುಣಂ ಭಾವಿಸತ್ಯಾಧಿರಾಜಂ ವಾಯುಂ ಸತ್ಯಾಧಿರಾಜಂ
ಬುಧಗಣವಿನುತಂ ವೆಂಕಟಾರ್ಯಂ ಪ್ರಣಮ್ಯ ॥
ಸಂಧ್ಯಾಮಂತ್ರಾನ್ ಮನೋಜ್ಞಾಂ ಸ್ತ್ರಿಸಮಯವಿಹಿತಾನ್ ಋಗ್ಯಜುರ್ವೇದಿನಾಂ ಚ ವ್ಯಾಕುರ್ವೇ
ಬುದ್ಧಿಶುದ್ಧ್ಯೈ ಮಮ ಗುರುವರಗ ಶ್ರೀಹರಿಪ್ರೀತಯೇಽಲಂ॥
ಋಗ್ಭಾಷ್ಯೇ ಸೂತ್ರಭಾಷ್ಯೇ ದಶನಿಗಮಶಿರೋದಿವ್ಯಭಾಷ್ಯೇಷು ಗೀತಾಭಾಷ್ಯೇ ತಂತ್ರಾದಿಸಾರೇ ಸ್ಮೃತಿಮುಖ ಸುಕೃತೌ
ಭಾರತಾರ್ಥಪ್ರಕಾಶೇ॥ ವಿಕ್ಷಿಪ್ತೋಕ್ತ್ಯಾನುವಕ್ತುರ್ಮಮ ಸಹಿ ನ ಭವೇದನ್ಯಥಾಧೀಜದೋಷೋಭಾಷಾರೀತ್ಯುಕ್ತಮಾದೇಃ
ಪರಿಚಯರಹಿತಸ್ಯಾಗಮಾರ್ಥಾಭಿಧಾತುಃ॥

1.ಅಥ ಸಂಧ್ಯೋಪಾಸನಂ:- ಅಥ ಸಂಧ್ಯೋಪಾಸ್ತಿಃ ಕರ್ತವ್ಯಾ। ''ಅಹರಹಃ ಸಂಧ್ಯಾಮುಪಾಸೀತ'' ಇತಿ ಶ್ರುತೇಃ। ''ಪ್ರಾತರುತ್ಥಾಯ ಸಂಧ್ಯಾಮುಪಾಸೀತ'' ಇತಿ ಭಾಷ್ಯೋದಾಹೃತ ಶ್ರುತೇಶ್ಚ । ''ಸಂಧ್ಯಾಹೀನೋಽಶುಚಿರ್ನಿತ್ಯಮನರ್ಹಃ ಸರ್ವಕರ್ಮಸು । ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥ ನಾನುತಿಷ್ಠತಿ ಯಃ ಪೂರ್ವಾಮುಪಾಸ್ತೇ ನ ಚ ಪಶ್ಚಿಮಾಂ । ಸ ಶೂದ್ರವದ್ಬಹಿಷ್ಕಾರ್ಯಃ ಸರ್ವಸ್ಮಾದ್ದ್ವಿಜಕರ್ಮಣಃ ॥'' 'ದ್ವಾದಶಾಹಮನಗ್ನಿಕಃ ಸಂಧ್ಯಾಹೀನೋ ದಿನತ್ರಯಂ ಚತುರ್ವೇದ-ವಿದಾವಿಪ್ರಃ ಶೂದ್ರಏವ ನ ಸಂಶಯಃ' ಚತುರ್ವೇದವಿದೇತಿ॥ ಚತುರ್ವೇದವಿತ್ ಆ ಇತಿ ಛೇದಃ। ಆ ಸಮ್ಯಕ್ ಚತುರ್ವೇದ- ವಿದಪಿ ಶೂದ್ರ ಏವೇತ್ಯರ್ಥಃ। ಅನಗ್ನಿಕ ಇತಿ ದೀರ್ಘಶ್ಛಾಂದಸಃ। ಸಂಧ್ಯಾತಿಕ್ರಮಣಂ ಯಸ್ಯ ಸಪ್ತರಾತ್ರಂ ಗಮಿಷ್ಯತಿ। ಉನ್ಮತ್ತದೋಷ ಯುಕ್ತಸ್ತು ಪುನಃ ಸಂಸ್ಕಾರಮರ್ಹತೀತ್ಯಾದಿ ಸ್ಮೃತಿಭ್ಯಶ್ಚ॥ ''ಪೂರ್ವಾಸಂಧ್ಯಾಂ ಸ ನಕ್ಷತ್ರಾಂ ಉತ್ತರಾಂ ಸ ದಿವಾಕರಾ'' ಮಿತಿ ಸದಾಚಾರಸ್ಮೃತೇಶ್ಚ ॥ ಆಚಮನಪ್ರಾಣಾಯಾಮದೇಶಕಾಲಸಂಕೀರ್ತನಪೂರ್ವಕಸಂಕಲ್ಪಕರಣ-ಮಾರ್ಜನಜಲಪ್ರಾಶನ ಪಾಪಪುರುಷವಿಸರ್ಜನ-ಅರ್ಘ್ಯಪ್ರದಾನ-ಮಂತ್ರತಃಪರಿವರ್ತನಾಸನಋಷಿಛಂದೋದೇವತಾನುಸ್ಮರಣ-ನ್ಯಾಸಧ್ಯಾನಪೂರ್ವಕ ಗಾಯತ್ರೀಜಪ-ಸಂಧ್ಯೋಪಸ್ಥಾನ-ದಿಗ್ದೇವತಾನಮನ-ಸಂಧ್ಯಾಕ್ಷಮಾಪನ-ಸ್ವಗೋತ್ರೋತ್ಕೀರ್ತನ- ಪೂರ್ವಕಾಭಿವಾದನ- ಶ್ರೀಹರಿ ಸಮರ್ಪಣಭೇದೇನ ಅನೇಕಾಂಗೋಪೇತಾ ಸಂಧ್ಯೋಪಾಸ್ತಿಃ ॥ ಅರ್ಘ್ಯಪ್ರದಾನ ಗಾಯತ್ರೀಜಪ ಸಂಧ್ಯೋಪಸ್ಥಾನಾನಾಂ ಕ್ರಿಯಾಣಾಂ ಪ್ರಾಧಾನ್ಯಂ। ಅತ್ರ ಗಾಯತ್ರೀ ಜಪ ಏವ ಸಂಧ್ಯೋಪಾಸ್ತಿಃ। ಇತರೇಷಾಂ ತು ಪೂರ್ವೋತ್ತರಾಂಗತ್ವಂ। ಗಾಯತ್ರೀಜಪ ಸಂಧ್ಯೋಪಾಸ್ತಿಶಬ್ದಯೋರೇಕಾರ್ಥತಾಂ ಉತ್ತರತ್ರ ದರ್ಶಯಿಷ್ಯಾಮಃ।

( ಈ ಪುಸ್ತಕಗಳ ಮುಂದಿನ ಭಾಗವು ಸಂಧ್ಯಾಮಂತ್ರಗಳ ಅರ್ಥಗಳ ಜೊತೆಗೆ ಬರೆಯಲಾಗುತ್ತಿದೆ. )

ಶ್ರೀ ಭಾರತೀರಮಣ ಮುಖ್ಯವಾಯುಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿ ರಾಮಕೃಷ್ಣವೇದವ್ಯಾಸಾಭಿನ್ನ
ಶ್ರೀಲಕ್ಷ್ಮೀಹಯಗ್ರೀವಾಭಿನ್ನ ಶ್ರೀಶೀಬಿಲಕ್ಷ್ಮೀನರಸಿಂಹಾರ್ಪಣಮಸ್ತು॥